"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**28ನೇ ಜನವರಿ 2021**
**ಗುರುವಾರ**

**ವಿಷಯಾನುಕ್ರಮಣಿಕೆ**

**01.** **ಘನತೆವೆತ್ತ ರಾಜ್ಯಪಾಲರು ಉಭಯ ಸದಸನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ**

**02.** **ಸಂತಾಪ ಸೂಚನೆಗಳು**

**ವಿಷಯ: ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಗಳಾಗಿದ್ದ ಶ್ರೀ ಎಸ್.ಎಲ್.ಧರ್ಮೇಗೌಡ, ಮಾಜಿ ಸಚಿವರಾಗಿದ್ದ ಶ್ರೀ ಜೈವಂತ ಪ್ರೇಮಾನಂದ ಸುಬ್ರಾಯ್, ಶ್ರೀ ರೇಣುಕಾ ರಾಜೇಂದ್ರನ್ ಹಾಗೂ ಶ್ರೀ ಮಲ್ಲಪ್ಪ ಚನ್ನವೀರಪ್ಪ ಮನಗೂಳಿ, ಹಿರಿಯ ವಿದ್ವಾಂಸರಾದ ಡಾ॥ಬನ್ನಂಜೆ ಗೋವಿಂದಾಚಾರ್ಯ, ಪ್ರೊ॥ರೊದ್ದಂ ನರಸಿಂಹ, ಶ್ರೇಷ್ಠ ಉದ್ಯಮಿ ಶ್ರೀ ರಾಮನಾಗಪ್ಪ ಶೆಟ್ಟಿ, ಕೃಷಿ ಸಾಧಕಿ ಶ್ರೀಮತಿ ಮಹಾದೇವಿ ಅಣ್ಣಾರಾವ್ ವಣದೆ, ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಹರ್ಷಾನಂದ ಮಹಾರಾಜ್ ಹಾಗೂ ಖ್ಯಾತ ಹಿಂದುಸ್ಥಾನಿ ಸಂಗೀತಗಾರ ಗುಲಾಮ್ ಮುಸ್ತಫಾ ಖಾನ್ ಇವರುಗಳ ನಿಧನದ ಬಗ್ಗೆ.**

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

~*~*~*~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(01)/28.01.2021/12.40/ಹೆಚ್‌ವಿಃಆರ್‌ಎನ್, (02)/28.01.2021/12.50/ಡಿಎಸ್:ಆರ್‌ಎನ್

**ಕರ್ನಾಟಕ ವಿಧಾನ ಪರಿಷತ್ತು**
**ಗುರುವಾರ, 28ನೇ ಜನವರಿ 2021**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಮಧ್ಯಾಹ್ನ 12 ಗಂಟೆ 43 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನವು 'ವಂದೇ ಮಾತರಂ' ಗೀತೆಯೊಂದಿಗೆ ಆರಂಭವಾಯಿತು)**

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1. ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ

**ಸಭಾಪತಿಯವರು:-** ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

**ಕಾರ್ಯದರ್ಶಿ, ಕವಿಪ:-** ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳನ್ನು ಸಭೆಯ ಮುಂದಿಡುತ್ತೇನೆ.

**(ರಾಜ್ಯಪಾಲರ ಭಾಷಣದ ಕನ್ನಡ ಮತ್ತು ಆಂಗ್ಲಭಾಷೆಯ ಎರಡೂ ಪ್ರತಿಗಳನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಸಂತಾಪ ಸೂಚನೆಗಳು

**ವಿಷಯ: ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಗಳಾಗಿದ್ದ ಶ್ರೀ ಎಸ್.ಎಲ್.ಧರ್ಮೇಗೌಡ, ಮಾಜಿ ಸಚಿವರಾಗಿದ್ದ ಶ್ರೀ ಜೈವಂತ ಪ್ರೇಮಾನಂದ ಸುಬ್ರಾಯ್. ಶ್ರೀ ರೇಣುಕಾ ರಾಜೇಂದ್ರನ್ ಹಾಗೂ ಶ್ರೀ ಮಲ್ಲಪ್ಪ ಚನ್ನವೀರಪ್ಪ ಮನಗೂಳಿ, ಹಿರಿಯ ವಿದ್ವಾಂಸರಾದ ಡಾ:ಬನ್ನಂಜೆ ಗೋವಿಂದಾಚಾರ್ಯ, ಪ್ರೊ:ರೊದ್ದಂ ನರಸಿಂಹ, ಶ್ರೇಷ್ಠ ಉದ್ಯಮಿ ಶ್ರೀ ರಾಮನಾಗಪ್ಪ ಶೆಟ್ಟಿ, ಕೃಷಿ ಸಾಧಕಿ ಶ್ರೀಮತಿ ಮಹಾದೇವಿ ಅಣ್ಣಾರಾವ್ ವಣದೆ, ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಹರ್ಷಾನಂದ ಮಹಾರಾಜ್ ಹಾಗೂ ಖ್ಯಾತ ಹಿಂದುಸ್ಥಾನಿ ಸಂಗೀತಗಾರ ಗುಲಾಮ್ ಮುಸ್ತಫಾ ಖಾನ್ ಇವರುಗಳ ನಿಧನದ ಬಗ್ಗೆ.**

-----

**ಸಭಾಪತಿಯವರು:–** ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಗಳಾಗಿದ್ದ ಎಸ್.ಎಲ್. ಧರ್ಮೇಗೌಡ, ಮಾಜಿ ಸಚಿವರಾಗಿದ್ದ ಜೈವಂತ ಪ್ರೇಮಾನಂದ ಸುಬ್ರಾಯ್, ರೇಣುಕಾ ರಾಜೇಂದ್ರನ್ ಹಾಗೂ ಮಲ್ಲಪ್ಪ ಚನ್ನವೀರಪ್ಪ ಮನಗೂಳಿ, ಹಿರಿಯ ವಿದ್ವಾಂಸರಾದ ಡಾ:ಬನ್ನಂಜೆ ಗೋವಿಂದಾಚಾರ್ಯ, ಪ್ರೊಫೆಸರ್ ರೊದ್ದಂ ನರಸಿಂಹ, ನಾಡಿನ ಶ್ರೇಷ್ಠ ಉದ್ಯಮಿ ಹಾಗೂ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ರಾಮ ನಾಗಪ್ಪ ಶೆಟ್ಟಿ, ಕೃಷಿ ಸಾಧಕಿ ಮಹಿಳೆ ಮಹಾದೇವಿ ಅಣ್ಣಾರಾವ್ ವಣದೆ, ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಹರ್ಷಾನಂದ ಮಹಾರಾಜ್ ಹಾಗೂ ಖ್ಯಾತ ಹಿಂದುಸ್ಥಾನಿ ಸಂಗೀತಗಾರ ಗುಲಾಮ್ ಮುಸ್ತಫಾ ಖಾನ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

### 01. ಎಸ್.ಎಲ್. ಧರ್ಮೇಗೌಡ

**ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಗಳಾಗಿದ್ದ ಎಸ್.ಎಲ್. ಧರ್ಮೇಗೌಡ ಅವರು ದಿನಾಂಕ: 28.12.2020ರಂದು ನಿಧನ ಹೊಂದಿರುತ್ತಾರೆ.**

1955ರ ಡಿಸೆಂಬರ್, 16ರಂದು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಸಖರಾಯ ಪಟ್ಟಣದ ಸರಪನಹಳ್ಳಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ. ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಕಾಲೇಜು ದಿನಗಳಲ್ಲೇ ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡು ಜನತಾ ಪಕ್ಷದ ಕಾರ್ಯಕರ್ತರಾಗಿ ರಾಜಕೀಯ ಪ್ರವೇಶಿಸಿದ್ದರು. ಚಿಕ್ಕಮಗಳೂರು ಬಿಲೇಕಲ್ಲಹಳ್ಳಿ ಮಂಡಲ ಪಂಚಾಯತ್ ಸದಸ್ಯರಾಗಿ ನಂತರ ಮಂಡಲ ಪಂಚಾಯತ್ ಪ್ರಧಾನರಾಗಿ ಆಯ್ಕೆಯಾಗಿದ್ದರು. ಲಿಂಗದಹಳ್ಳಿ ಕ್ಷೇತ್ರದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದ ಶ್ರೀಯುತರು ಜಿಲ್ಲಾ ಪಂಚಾಯ್ತಿಯ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 37 ವರ್ಷಗಳ ಕಾಲ ಟಿ.ಎ.ಪಿ.ಸಿ.ಎಂ.ಎಸ್. ಗೆ ನಿರ್ದೇಶಕರಾಗಿ ಸೇವೆ ಸಲ್ಲಿಸಿ, 1985ರಲ್ಲಿ ಅಧ್ಯಕ್ಷರಾಗಿದ್ದರು. ಪಿ.ಸಿ.ಎ.ಆರ್.ಡಿ. ಬ್ಯಾಂಕಿನ ನಿರ್ದೇಶಕರಾಗಿ, 26 ವರ್ಷಗಳ ಕಾಲ ಹಾಸನ ಹಾಲು ಒಕ್ಕೂಟದ ನಿರ್ದೇಶಕರಾಗಿ, 1993ರಲ್ಲಿ ಅಧ್ಯಕರಾಗಿದ್ದರು. 1993ರಲ್ಲಿ ಮಿಲ್ಕ್ ಫೆಡರೇಷನ್ ನಿರ್ದೇಶಕರಾಗಿ, 1987 ಹಾಗೂ 2015ರಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿದ್ದರಲ್ಲದೆ 2007ರಲ್ಲಿ ಉಪಾಧ್ಯಕ್ಷರಾಗಿ 32 ವರ್ಷಗಳು ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ನಿರ್ದೇಶಕರಾಗಿ, 2004 ಮತ್ತು 2015ರಲ್ಲಿ ಅಧ್ಯಕ್ಷರಾಗಿ, 30 ವರ್ಷಗಳು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ನಿರ್ದೇಶಕರಾಗಿ 2015ರಲ್ಲಿ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ದೆಹಲಿಯ ರಾಷ್ಟ್ರೀಯ ಇಫ್ಕೋ, ನಾಫೆಡ್, ಎನ್‌ಸಿಡಿಸಿ, ಐಪಿಸಿಎಲ್‌ನಂತಹ ಉನ್ನತ ಸಂಸ್ಥೆಗಳಲ್ಲೂ ನಿರ್ದೇಶಕರಾಗಿದ್ದು, ಸಹಕಾರಿ ಕ್ಷೇತ್ರದಲ್ಲಿ ಅವಿರತ ಸೇವೆ ಸಲ್ಲಿಸುವ ಮೂಲಕ ತಮ್ಮದೇ ಆದ ಛಾಪು ಮೂಡಿಸಿದ್ದ ಶ್ರೀಯುತರು "ಸಹಕಾರಿ ಸೇವಾ ರತ್ನ" ಪ್ರಶಸ್ತಿಗೆ ಭಾಜನರಾಗಿದ್ದರು.

2004ರಲ್ಲಿ ಬೀರೂರು ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ವಿಧಾನ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. 2018ರಲ್ಲಿ ವಿಧಾನ ಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುತ್ತಾರೆ ಹಾಗೂ ದಿನಾಂಕ:19.12.2018ರಿಂದ ಉಪ ಸಭಾಪತಿಯಾಗಿ ಕಾರ್ಯನಿರ್ವಹಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನಿಕೆ ರಾಜಕಾರಣಿ ಹಾಗೂ ಸಹಕಾರಿ ಕ್ಷೇತ್ರದ ಧುರೀಣರೊಬ್ಬರನ್ನು ಕಳೆದುಕೊಂಡಂತಾಗಿದೆ.**

## 02. ಜೈವಂತ ಪ್ರೇಮಾನಂದ ಸುಬ್ರಾಯ್

**ಮಾಜಿ ಸಚಿವರಾಗಿದ್ದ ಜೈವಂತ ಪ್ರೇಮಾನಂದ ಸುಬ್ರಾಯ್ ಅವರು ದಿನಾಂಕ:11.12.2020ರಂದು ನಿಧನ ಹೊಂದಿರುತ್ತಾರೆ.**

1944ರ ಜನವರಿ 10ರಂದು ಶಿರಸಿಯಲ್ಲಿ ಜನಿಸಿದ್ದ ಶ್ರೀಯುತರು ಪಿ.ಯು.ಸಿ.,ವರೆಗೆ ವ್ಯಾಸಂಗವನ್ನು ಮಾಡಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ಸಣ್ಣ ಕೈಗಾರಿಕೋದ್ಯಮಿಯಾಗಿದ್ದರು. 1994ರಲ್ಲಿ 10ನೇ ವಿಧಾನ ಸಭೆಗೆ ಶಿರಸಿ ವಿಧಾನ ಸಭಾ ಕ್ಷೇತ್ರದಿಂದ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀಯುತರು ಜೆ.ಹೆಚ್. ಪಟೇಲ್‌ರವರ ಸಚಿವ ಸಂಪುಟದಲ್ಲಿ ಅಬಕಾರಿ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಶಿರಸಿಯ ಗಂಗಾ ಪರಮೇಶ್ವರಿ ಕೋ–ಆಪರೇಟಿವ್ ಸೊಸೈಟಿಯ ಸಂಸ್ಥಾಪಕರಾಗಿ, ಮೊಗೇರಾ ಸಮಾಜ ಸಂಘದ ಜಿಲ್ಲಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀಯುತರು ರಾಜೀವ್‌ಗಾಂಧಿ ಎಕ್ಸಲೆನ್ಸಿ ಪ್ರಶಸ್ತಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

## 03. ರೇಣುಕಾ ರಾಜೇಂದ್ರನ್

**ಮಾಜಿ ಸಚಿವರಾಗಿದ್ದ ರೇಣುಕಾ ರಾಜೇಂದ್ರನ್ ಅವರು ದಿನಾಂಕ:15.12.2020ರಂದು ನಿಧನ ಹೊಂದಿರುತ್ತಾರೆ.**

1946ರ ಡಿಸೆಂಬರ್ 12ರಂದು ಜನಿಸಿದ್ದ ಶ್ರೀಯುತರು ಬಿ.ಎ. ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. 1972ರಲ್ಲಿ ಕೋಲಾರ ಜಿಲ್ಲೆಯ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಿಂದ, 1978 ಹಾಗೂ 1989ರಲ್ಲಿ ಚಿಕ್ಕಬಳ್ಳಾಪುರ ವಿಧಾನ ಸಭಾ ಮೀಸಲು ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ವಿಧಾನ ಸಭಾ ಸದಸ್ಯರಾಗಿ ಶ್ರೀಯುತರು ಸೇವೆ ಸಲ್ಲಿಸಿರುತ್ತಾರೆ. ದಿವಂಗತ ಗುಂಡೂರಾವ್ ಅವರ ಸಚಿವ ಸಂಪುಟದಲ್ಲಿ ರೇಷ್ಮೆ ಹಾಗೂ ಕ್ರೀಡಾ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಮಹಿಳಾ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

## 04. ಮಲ್ಲಪ್ಪ ಚನ್ನವೀರಪ್ಪ ಮನಗೂಳಿ

**ಮಾಜಿ ಸಚಿವರಾಗಿದ್ದ ಮಲ್ಲಪ್ಪ ಚನ್ನವೀರಪ್ಪ ಮನಗೂಳಿ ಅವರು ದಿನಾಂಕ:28.01.2021ರಂದು ನಿಧನ ಹೊಂದಿರುತ್ತಾರೆ.**

1936ನೇ ಜನವರಿ 15ರಂದು ಸಿಂಧಗಿಯಲಿ ಜನಿಸಿದ್ದ ಶ್ರೀಯುತರು ಕೃಷಿ ವಿಷಯದಲ್ಲಿ ಡಿಪ್ಲೊಮೋ ವ್ಯಾಸಂಗವನ್ನು ಮಾಡಿರುತ್ತಾರೆ. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. 1994ರಲ್ಲಿ ಸಿಂಧಗಿ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1998ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿ ಹಾಗೂ 2018ರಲ್ಲಿ ಎರಡನೇ ಬಾರಿಗೆ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾಗಿ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದ ಸಚಿವ ಸಂಪುಟದಲ್ಲಿ ತೋಟಗಾರಿಕೆ ಸಚಿವರಾಗಿಯೂ ಶ್ರೀಯುತರು ಕಾರ್ಯನಿರ್ವಹಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

## 05.ಡಾ: ಬನ್ನಂಜೆ ಗೋವಿಂದಾಚಾರ್ಯ

**ಹಿರಿಯ ವಿದ್ವಾಂಸ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ವಾಗ್ಮಿಗಳಾದ ಡಾ:ಬನ್ನಂಜೆ ಗೋವಿಂದಾಚಾರ್ಯ ಅವರು ದಿನಾಂಕ:13.12.2020ರಂದು ನಿಧನ ಹೊಂದಿರುತ್ತಾರೆ.**

1936ರ ಆಗಸ್ಟ್ 3ರಂದು ಉಡುಪಿ ಜಿಲ್ಲೆಯ ಅಂಬಲಪಾಡಿಯಲ್ಲಿ ಜನಿಸಿದ್ದ ಶ್ರೀಯುತರು ಸಂಸ್ಕೃತದ ಪ್ರಖಾಂಡ ಪಂಡಿತ, ಅಪ್ರತಿಮ ಮೇಧಾವಿ, ಖ್ಯಾತ ಪ್ರವಚನಕಾರರು, ಭಾಷಾಂತರಕಾರರು, ಕವಿ ಹಾಗೂ ಉದಯವಾಣಿ ದಿನಪತ್ರಿಕೆಯ ಸಾಪ್ತಾಹಿಕ ವಿಭಾಗದ ಸಂಪಾದಕರೂ ಆಗಿದ್ದರು. ತಮ್ಮ ಪ್ರವಚನಗಳ ಮೂಲಕ ತತ್ವ ಪ್ರಚಾರ ಕೈಗೊಂಡಿದ್ದರು. ಮಾಧ್ವ ತತ್ವದಲ್ಲಿ ಅಮೋಘ ಪಾಂಡಿತ್ಯ ಸಾಧಿಸಿದ್ದ ಇವರು ಅನೇಕ ಕೃತಿಗಳನ್ನು ರಚಿಸಿದ್ದರು. ಕನ್ನಡ ಹಾಗೂ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿದ್ದ ಇವರು ಕನಕೋಪನಿಷತ್, ಪುರಂದರೋಪನಿಷತ್, ಉಡುಪಿಯ ಕೃಷ್ಣದಾಸರು ಕಂಡಂತೆ, ದಾಸ ಸಾಹಿತ್ಯ ಪರಂಪರೆ ಇತ್ಯಾದಿ ಕನ್ನಡ ಕೃತಿಗಳನ್ನು ರಚಿಸಿದ್ದರಲ್ಲದೆ ಅನೇಕ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದರು. ಬಾಣಭಟ್ಟನ ಕಾದಂಬರಿ, ಕಾಳಿದಾಸನ ಶಾಕುಂತಲಾ, ಶೂದ್ರಕನ ಮೃಚ್ಛಕಟಿಕ ಇತ್ಯಾದಿ ಶ್ರೀಯುತರ ಚಾರಿತ್ರಿಕ ಕೃತಿಗಳಾಗಿವೆ. ಮಧ್ವಾಚಾರ್ಯರ ಮಾಧ್ವರಾಮಾಯಣ ರಾಜರಾಜೇಶ್ವರಿ ಯತಿಗಳ ಮಂಗಲಾಷ್ಟಕ ಇತ್ಯಾದಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಜಿ.ವಿ. ಅಯ್ಯರ್ ಅವರ ಶ್ರೀ ಶಂಕರಾಚಾರ್ಯ, ಶ್ರೀ ಮಧ್ವಾಚಾರ್ಯ ಹಾಗೂ ಶ್ರೀ ರಾಮಾನುಜಾಚಾರ್ಯ ಸಂಸ್ಕೃತ ಚಲನಚಿತ್ರಗಳಿಗೆ ಸಂಭಾಷಣಾಕಾರರಾಗಿ ಕಾರ್ಯನಿರ್ವಹಿಸುವ ಮೂಲಕ ಚಲನಚಿತ್ರ ಕ್ಷೇತ್ರಕ್ಕೂ ತಮ್ಮ ಕೊಡುಗೆಯನ್ನು ನೀಡಿದ್ದರು.

ಸಮಾಜಕ್ಕೆ ಜ್ಞಾನದ ಸುಧೆಯುಣಿಸಿದ ಶ್ರೀಯುತರು ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, ಪಂಡಿತ ರತ್ನ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಶ್ರೇಷ್ಠ ಆಧ್ಯಾತ್ಮಿಕ ಪ್ರವಚನಕಾರರು, ಸಾರಸ್ವತ ಲೋಕದ ಹಿರಿಯ ವಿದ್ವಾಂಸರೊಬ್ಬರನ್ನು ಕಳೆದುಕೊಂಡಂತಾಗಿದೆ.**

## 06.ಪ್ರೊಫೆಸರ್ ರೊದ್ದಂ ನರಸಿಂಹ

**ಪದ್ಮವಿಭೂಷಣ ಮತ್ತು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರು ಹಾಗೂ ಭಾರತೀಯ ವೈಮಾನಿಕ ವಿಜ್ಞಾನಿ ಮತ್ತು ದ್ರವಚಲನ ಶಾಸ್ತ್ರಜ್ಞರಾದ ಪ್ರೊಫೆಸರ್ ರೊದ್ದಂ ನರಸಿಂಹ ಅವರು ದಿನಾಂಕ:14.12.2020ರಂದು ನಿಧನ ಹೊಂದಿರುತ್ತಾರೆ.**

1933ರ ಜುಲೈ 20ರಂದು ಜನಿಸಿದ್ದ ಶ್ರೀಯುತರು ಮೈಸೂರು ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್ ಪದವಿಯನ್ನು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಮಾಸ್ಟರ್ಸ್ ಆಫ್ ಎಂಜಿನಿಯರಿಂಗ್ ಪದವಿಯನ್ನು ಹಾಗೂ ಅಮೇರಿಕದ ಕ್ಯಾಲಿಫೋರ್ನಿಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿರುತ್ತಾರೆ. ಪರಿಸರ ವಿಜ್ಞಾನ ಕೇಂದ್ರದ ಸಂಸ್ಥಾಪಕರಾಗಿ ಭಾರತೀಯ ವಿಜ್ಞಾನ ಸಂಸ್ಥೆಯ ಏರೋಸ್ಪೇಸ್ ಎಂಜಿನಿಯರಿಂಗ್‌ನ ಪ್ರಾಧ್ಯಾಪಕರಾಗಿ, ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ನಿರ್ದೇಶಕರಾಗಿ, ಜವಹರಲಾಲ್ ನೆಹರು ಕೇಂದ್ರದ ಎಂಜಿನಿಯರಿಂಗ್ ಮೆಕ್ಯಾನಿಕ್ಸ್ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ ಹಾಗೂ ಹೈದರಾಬಾದ್ ವಿಶ್ವವಿದ್ಯಾಲಯದ ವಿಜ್ಞಾನ ಮತ್ತು ಎಂಜಿನಿಯರಿಂಗ್ ಪ್ರಾಟ್ ಮತ್ತು ವಿಟ್ನೆ ಪೀಠಾಧ್ಯಕ್ಷರೂ ಆಗಿದ್ದ ಶ್ರೀಯುತರು ಮುಖ್ಯವಾಗಿ ಏರೋಸ್ಪೇಸ್ ಫ್ಲೂಯಿಡ್ ಡೈನಾಮಿಕ್ಸ್, ಮೋಡಗಳ ರಚನೆ ಕುರಿತು ಅಂತರ ರಾಷ್ಟ್ರೀಯ ಮಟ್ಟದ ಸಂಶೋಧನೆ ಮತ್ತು ಪರಿಸರದ ವಾತಾವರಣದ ಕುರಿತು ಹಲವು ಸಂಶೋಧನೆಯನ್ನು ಮಾಡಿರುತ್ತಾರೆ. 200ಕ್ಕೂ ಅಧಿಕ ಸಂಶೋಧನಾ ಪ್ರಕಟಣೆಗಳ ಲೇಖಕರಾಗಿ ನೂರಾರು ಯುವ ವಿಜ್ಞಾನಿಗಳಿಗೆ ಮಾರ್ಗದರ್ಶಕರಾಗಿದ್ದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಶ್ರೀಯುತರು ಕಲಬುರ್ಗಿ ವಿಶ್ವವಿದ್ಯಾಲಯದ ಜೀವಮಾನದ ಸಾಧನೆಯ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ ಹಾಗೂ ಇತರೆ ಹತ್ತು ಹಲವಾರು ಅಂತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಶ್ರೇಷ್ಠ ವಿಜ್ಞಾನಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 07 ರಾಮ ನಾಗಪ್ಪ ಶೆಟ್ಟಿ

**ನಾಡಿನ ಶ್ರೇಷ್ಠ ಉದ್ಯಮಿ, ಆರ್.ಎನ್.ಎಸ್. ಶಿಕ್ಷಣ ಮತ್ತು ಉದ್ಯಮ ಸಮೂಹಗಳ ಸ್ಥಾಪಕರು ಹಾಗೂ ಸಮಾಜಮುಖಿ ಚಿಂತಕರಾದ ಆರ್.ಎನ್.ಶೆಟ್ಟಿ ಎಂದೇ ಖ್ಯಾತರಾಗಿದ್ದ ರಾಮ ನಾಗಪ್ಪ ಶೆಟ್ಟಿ ಅವರು ದಿನಾಂಕ: 17.12.2020ರಂದು ನಿಧನ ಹೊಂದಿರುತ್ತಾರೆ.**

1928ರ ಆಗಸ್ಟ್ 15ರಂದು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದ್ದ ಶ್ರೀಯುತರು ಪ್ರೌಢ ಶಿಕ್ಷಣ ಮುಗಿಸಿದ ನಂತರ ಶಿರಸಿಯಲ್ಲಿ ಗುತ್ತಿಗೆದಾರರಾಗಿ ವೃತ್ತಿ ಜೀವನ ಆರಂಭಿಸಿದ್ದರು. ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ವೈದ್ಯಕೀಯ, ಆತಿಥ್ಯ, ವಸತಿ, ಔದ್ಯಮಿಕ, ಔದ್ಯೋಗಿಕ, ವಾಣಿಜ್ಯ, ಶೈಕ್ಷಣಿಕ, ಮೂಲಸೌಕರ್ಯ, ವಿದ್ಯುತ್ ಹಾಗೂ ನೀರಾವರಿ ಕ್ಷೇತ್ರ ಸೇರಿದಂತೆ ವಿವಿಧ ರಂಗಗಳಲ್ಲಿ ಶ್ರೀಯುತರು ತಮ್ಮದೇ ಆದ ಛಾಪನ್ನು ಮೂಡಿಸಿದ್ದರು. ಒಟ್ಟು 24 ಸಂಸ್ಥೆಗಳನ್ನು ಸ್ಥಾಪಿಸಿ ಹತ್ತು ಸಾವಿರಕ್ಕೂ ಹೆಚ್ಚು ಜನರಿಗೆ ಖಾಯಂ ಉದ್ಯೋಗ ನೀಡಿದ್ದರು. ಕೃಷಿ, ಜಲ, ಸೌರ, ಗಾಳಿ ವಿದ್ಯುತ್ ಉತ್ಪಾದನಾ ಘಟಕಗಳು, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಸಹಿತ ಹಲವು ಅಭಿವೃದ್ಧಿ ಯೋಜನೆಗಳನ್ನು ಆರ್.ಎನ್.ಎಸ್. ಸಮೂಹ ಸಂಸ್ಥೆಗಳಿಂದ ಕೈಗೊಂಡಿದ್ದರು. ಮುರುಡೇಶ್ವರ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯ ಮೂಲಕ ಪ್ರಸಿದ್ಧ ಪ್ರವಾಸೋದ್ಯಮ ಕ್ಷೇತ್ರವಾಗಿ ಬೆಳೆಯಲು ಕಾರಣೀಕರ್ತರಾಗಿರುತ್ತಾರೆ.

1966ರಲ್ಲಿ ಹುಬ್ಬಳ್ಳಿಗೆ ಬಂದು ನವೀನ್ ಮೆಕನೈಸ್ಡ್ ಕಂಪನಿ ಪ್ರಾರಂಭಿಸಿ ಅತ್ಯಂತ ದೊಡ್ಡ ಪ್ರಾಜೆಕ್ಟ್‌ಗಳಾದ ಹಿಡಕಲ್, ತಟ್ಟಿಹಳ್ಳ, ಸೂಪಾ, ಗೇರುಸೊಪ್ಪ ಜಲಾಶಯಗಳು ಮತ್ತು ರಾಜನ್ ಕೊಲ್ಲೂರು, ಗುಂಡಲ್ಕೇರಾ ಮುಂತಾದವುಗಳಲ್ಲಿ ಮುಖ್ಯ ಟನಲ್ ಮತ್ತು ಬ್ರಿಡ್ಜ್‌ಗಳ ನಿರ್ಮಾಣದ ಮಹಾತ್ಕಾರ್ಯಗಳನ್ನು ನೇರವಾಗಿ ಕೈಗೆತ್ತಿಕೊಂಡು ಅತ್ಯುತ್ತಮ ರೀತಿಯಲ್ಲಿ ಪೂರ್ಣಗೊಳಿಸಿದ ಹೆಗ್ಗಳಿಕೆಗೆ ಶ್ರೀಯುತರು ಪಾತ್ರರಾಗಿದ್ದರು. ಮಹಾತ್ವಾಕಾಂಕ್ಷಿ ಕೊಂಕಣ ರೈಲು ಮಾರ್ಗ ನಿರ್ಮಾಣಕ್ಕಾಗಿ 18 ಟನಲ್‌ಗಳನ್ನು ನಿರ್ಮಿಸಿಕೊಟ್ಟಿರುತ್ತಾರೆ. ರಾಜ್ಯದ ಅತಿ ದೊಡ್ಡ ನೀರಾವರಿ ಯೋಜನೆಯಾದ ಅಪ್ಪರ್ ಕೃಷ್ಣಾ–ನಾರಾಯಣಪುರ ಡ್ಯಾಮ್‌ಗೆ ಮುಖ್ಯ ಕೆನಾಲ್ ನಿರ್ಮಾಣ ಮಾಡಿರುತ್ತಾರೆ. 1993ರಲ್ಲಿ ವಿದ್ಯುತ್ ಉತ್ಪಾದನಾ ಸ್ಥಾವರ ಸ್ಥಾಪನೆ, ಮುರುಡೇಶ್ವರ ಪವರ್ ಕಾರ್ಪೋರೇಶನ್ ಲಿಮಿಟೆಡ್ ಮೂಲಕ ಹೈಡ್ರೋ ಎಲೆಕ್ಟ್ರಿಕಲ್ ಪವರ್ 12 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕವನ್ನು ವಿಜಯಪುರ ಜಿಲ್ಲೆಯ ನಾರಾಯಣಪುರದಲ್ಲಿ ಸ್ಥಾಪಿಸಿರುತ್ತಾರೆ. 1994ರಲ್ಲಿ ದೇಶದಲ್ಲಿಯೇ ಪ್ರಸಿದ್ಧವಾದ ಮಾರುತಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಯೋಗ್ ಲಿಮಿಟೆಡ್ ಸಹಯೋಗತ್ವದೊಂದಿಗೆ ಆರ್.ಎನ್.ಎಸ್ ಮೋಟಾರ್ಸ್ ಶೋರೂಂ ಅನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಸಹಕಾರಿಗಳಾಗಿರುತ್ತಾರೆ.

ಸಮಾಜಕ್ಕೆ ಶ್ರೀಯುತರು ನೀಡಿರುವ ಅಸಾಧಾರಣ ಕೊಡುಗೆಯನ್ನು ಪರಿಗಣಿಸಿ ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪುರಸ್ಕಾರ, ಎಫ್.ಕೆ.ಸಿ.ಸಿ.ಐ.ಯಿಂದ ವಿಶ್ವೇಶ್ವರಯ್ಯ ಮೆಮೋರಿಯಲ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕಾಸಿಯಾದಿಂದ ಕೈಗಾರಿಕಾ ರತ್ನ ಪ್ರಶಸ್ತಿ ಹಾಗೂ ಕೆನರಾ ಕಾಲೇಜು ಸೊಸೈಟಿಯಿಂದ ಕೆನರಾ ರತ್ನ ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ಶ್ರೇಷ್ಠ ಸಮಾಜಮುಖಿ ಉದ್ಯಮಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

**08. ಮಹಾದೇವಿ ಅಣ್ಣಾರಾವ ವಣದೆ**

**ಕೃಷಿ ಸಾಧಕಿ ಮಹಿಳೆ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಹಾದೇವಿ ಅಣ್ಣಾರಾವ ವಣದೆ ಅವರು ದಿನಾಂಕ:27.12.2020ರಂದು ನಿಧನ ಹೊಂದಿರುತ್ತಾರೆ.**

ಸಣ್ಣ ಹಿಡುವಳಿದಾರರಾಗಿದ್ದ ಶ್ರೀಯುತರು ಮೂರು ಎಕರೆ ಜಮೀನಿನಲ್ಲಿ ಪುಷ್ಪ ಕೃಷಿಯನ್ನು ಯಶಸ್ವಿಯಾಗಿ ಮಾಡಿ ಕೃಷಿ ಕ್ಷೇತ್ರದ ಗಮನ ಸೆಳೆದಿದ್ದರು. ಕನ್ನಡ ಪ್ರಭ-ಸುವರ್ಣ ನ್ಯೂಸ್ ಮಹಿಳಾ ಸಾಧಕಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗೆ ಶ್ರೀಯುತರು ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಮಹಿಳಾ ಕೃಷಿಕರೊಬ್ಬರನ್ನು ಕಳೆದುಕೊಂಡಂತಾಗಿದೆ.**

**09 ಸ್ವಾಮಿ ಹರ್ಷಾನಂದ ಮಹಾರಾಜ್**

**ರಾಮಕೃಷ್ಣ ಮಠದ ಅಧ್ಯಕ್ಷರು ಹಾಗೂ ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳಲ್ಲಿ ಒಬ್ಬರಾಗಿದ್ದ ಸ್ವಾಮಿ ಹರ್ಷಾನಂದ ಮಹಾರಾಜ್ ಅವರು ದಿನಾಂಕ: 12.01.2021ರಂದು ನಿಧನ ಹೊಂದಿರುತ್ತಾರೆ.**

ಮಧ್ಯಪ್ರದೇಶದ ಭಾನುಪುರದಲ್ಲಿ ಜನಿಸಿದ್ದ ಶ್ರೀಯುತರು ಚಿನ್ನದ ಪದಕದೊಂದಿಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿಧರರಾಗಿದ್ದರು. 1954ರಲ್ಲಿ ಬಸವನಗುಡಿಯ ರಾಮಕೃಷ್ಣ ಮಠದಲ್ಲಿ ಆಧ್ಯಾತ್ಮ ಜೀವನ ಪ್ರಾರಂಭಿಸಿದ್ದರು. ರಾಮಕೃಷ್ಣ ಮಠದ ಸ್ವಾಮಿ ವಿಶುದ್ಧಾನಂದ ಅವರಿಂದ ಸನ್ಯಾಸ ದೀಕ್ಷೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಡೆದಿದ್ದ ಶ್ರೀಯುತರು ಮಂಗಳೂರು, ಮೈಸೂರು ಶಾಖೆಗಳಲ್ಲಿ ಹಾಗೂ ಮಹಾ ಸಂಘದ ಮೂಲ ಕೇಂದ್ರವಾದ ಕೋಲ್ಕತ್ತಾದ ಬೇಲೂರು ಮಠ, ಅಲಹಾಬಾದ್ ಶಾಖೆಯಲ್ಲಿ ಸೇವೆ ಸಲ್ಲಿಸಿ 31 ವರ್ಷಗಳ ಕಾಲ ಬೆಂಗಳೂರು ಶಾಖೆಯ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಸಂಸ್ಕೃತ, ಕನ್ನಡ, ತೆಲುಗು, ಹಿಂದಿ, ಬಂಗಾಳಿ, ಇಂಗ್ಲೀಷ್ ಭಾಷೆಗಳಲ್ಲಿ ಪರಿಣಿತರಾಗಿದ್ದ ಶ್ರೀಯುತರು ಸಂಸ್ಕೃತ, ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದರು. ಉತ್ತಮ ವಾಗ್ಮಿಗಳಾಗಿದ್ದ ಅವರು ಸನಾತನ ಧರ್ಮದ ವಿಷಯದಲ್ಲಿ ಪರಿಣಿತಿ ಪಡೆದಿದ್ದರು. 'ಎನ್‌ಸೈಕ್ಲೋಪಿಡಿಯಾ ಆಫ್ ಹಿಂದುಯಿಸಂ' ಎಂಬ ಮೇರು ಕೃತಿ ಶ್ರೀಯುತರ ವಿದ್ವತ್‌ಗೆ ಸಾಕ್ಷಿಯಾಗಿರುತ್ತದೆ.

**ಶ್ರೀಗಳ ನಿಧನದಿಂದಾಗಿ ರಾಜ್ಯವು ಒಬ್ಬ ಧಾರ್ಮಿಕ ಹಾಗೂ ಸೈದ್ಧಾಂತಿಕ ಗುರುವನ್ನು ಕಳೆದುಕೊಂಡಂತಾಗಿದೆ**

## 10. ಗುಲಾಮ್ ಮುಸ್ತಫಾ ಖಾನ್

**ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಖ್ಯಾತ ಹಿಂದುಸ್ಥಾನಿ ಸಂಗೀತಗಾರ ಗುಲಾಮ್ ಮುಸ್ತಫಾ ಖಾನ್ ಅವರು ದಿನಾಂಕ:17.01.2021ರಂದು ನಿಧನ ಹೊಂದಿರುತ್ತಾರೆ.**

1931ರ ಮಾರ್ಚ್ 3ರಂದು ಉತ್ತರ ಪ್ರದೇಶದ ಬದೌನ್‌ನಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ತಂದೆಯವರಿಂದಲೇ ಭಾರತೀಯ ಶಾಸ್ತ್ರೀಯ ಸಂಗೀತದ ಆರಂಭಿಕ ಶಿಕ್ಷಣ ಪಡೆದಿದ್ದರು. 8ನೇ ವಯಸ್ಸಿನಲ್ಲಿಯೇ ಸಾರ್ವಜನಿಕ ಕಾರ್ಯಕ್ರಮದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಮರಾಠಿ ಮತ್ತು ಗುಜರಾತಿ ಚಿತ್ರಗಳಿಗೆ ಹಿನ್ನಲೆ ಗಾಯಕರಾಗಿದ್ದರು. ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ 70ಕ್ಕೂ ಹೆಚ್ಚು ಸಾಕ್ಷ್ಯಚಿತ್ರಗಳಿಗೆ ಶ್ರೀಯುತರು ಕಂಠದಾನ ಮಾಡಿದ್ದರು. 1950ರ ದಶಕದಿಂದ ಖ್ಯಾತ ಗಾಯಕರುಗಳಾದ ಆಶಾ ಬೋಸ್ಲೆ, ಮನ್ನಾಡೇ, ವಹಿದಾ ರೆಹಮಾನ್, ಸೋನು ನಿಗಮ್ ಹಾಗೂ ಇನ್ನಿತರೆ ಗಾಯಕರುಗಳಿಗೆ ಗುರುಗಳಾಗಿದ್ದರು. ಸಂಗೀತ ಲೋಕಕ್ಕೆ ಅಪಾರ ಸೇವೆ ಸಲ್ಲಿಸಿದ್ದ ಶ್ರೀಯುತರು ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ ಹಾಗೂ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಹಿರಿಯ ಸಂಗೀತಗಾರರೊಬ್ಬರನ್ನು ಕಳೆದುಕೊಂಡಂತಾಗಿದೆ.**

**(ಮುಂದುವರಿದಿದೆ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(3)28–01–2021/1–00/ಬಿಕೆಪಿ–ವಿಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ತಾವು ಇವತ್ತು ಸಲ್ಲಿಸಿರುವ ಸಂತಾಪ ಸೂಚನೆಯಲ್ಲಿ ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಎಲ್. ಧರ್ಮೇಗೌಡರವರು, ಮಾಜಿ ಸಚಿವರಾಗಿದ್ದ ಶ್ರೀ ಜೈವಂತ ಪ್ರೇಮಾನಂದ ಸುಬ್ರಾಯ್, ಶ್ರೀ ರೇಣುಕಾ ರಾಜೇಂದ್ರನ್ ಹಾಗೂ ಶ್ರೀ ಮಲ್ಲಪ್ಪ ಚನ್ನವೀರಪ್ಪ ಮನಗೂಳಿ, ಹಿರಿಯ ವಿದ್ವಾಂಸರಾದ ಡಾ॥ ಬನ್ನಂಜೆ ಗೋವಿಂದಾಚಾರ್ಯ, ಪ್ರೊಫೆಸರ್ ರೊದ್ದಂ ನರಸಿಂಹ, ನಾಡಿನ ಶ್ರೇಷ್ಠ ಉದ್ಯಮಿ ಹಾಗೂ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀ ರಾಮ ನಾಗಪ್ಪ ಶೆಟ್ಟಿ, ಕೃಷಿ ಸಾಧಕಿ ಮಹಿಳೆ ಮಹಾದೇವಿ ಅಣ್ಣಾರಾವ ವಣದೆ, ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಹರ್ಷಾನಂದ ಮಹಾರಾಜ್ ಹಾಗೂ ಖ್ಯಾತ ಹಿಂದುಸ್ಥಾನಿ ಸಂಗೀತಗಾರ ಗುಲಾಮ್ ಮುಸ್ತಫಾ ಖಾನ್ ಅವರುಗಳು ನಿಧನರಾಗಿರುವ ವಿಚಾರವನ್ನು ಸಂತಾಪ ಸೂಚನೆಯಲ್ಲಿ ಉಲ್ಲೇಖ ಮಾಡಿದ್ದೀರಿ. ಇವರೆಲ್ಲರಿಗೂ ತಾವು ಮಂಡಿಸಿದಂತಹ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತ ಮಾಡುತ್ತೇನೆ.

ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಗಳಾಗಿದ್ದ ಶ್ರೀ ಎಸ್.ಎಲ್. ಧರ್ಮೇಗೌಡ ರವರು ನಮಗೆಲ್ಲರಿಗೂ ಆತ್ಮೀಯರಾಗಿದ್ದರು. ಅವರು ತಮ್ಮ ಬದುಕಿನಲ್ಲಿ ನಡೆದು ಬಂದಿರುವಂತಹ ದಾರಿ, ಇಟ್ಟಿರುವಂತಹ ಹೆಜ್ಜೆಯನ್ನು ನಾವುಗಳು ನೋಡಿದರೆ, ಬಹುತೇಕವಾಗಿ ಅವರು ಶಾಸಕರು, ಉಪ ಸಭಾಪತಿಯವರು ಎನ್ನುವುದಕ್ಕಿಂತ ಮಿಗಿಲಾಗಿ ಅವರು ಒಬ್ಬ ಸರ್ವಶ್ರೇಷ್ಠ ಸಹಕಾರಿ ಧುರೀಣ ಎಂದು ಅವರ ಬದುಕನ್ನು ಅರ್ಥ ಮಾಡಿಕೊಂಡಾಗ ನಮಗೆ ಅನಿಸುತ್ತದೆ. ಅವರು ನಿಧನ ಹೊಂದುವುದಕ್ಕಿಂತ ಮೊದಲು ಚಿಕ್ಕಮಗಳೂರಿಗೆ ನಾನು ಹೋದಾಗ ಅವರನ್ನು ಭೇಟಿಯಾಗಿ ಸುಮಾರು 1 ಗಂಟೆ ಕಾಲ ಚರ್ಚೆ ಮಾಡಲು ಅವಕಾಶವಾಯಿತು. ಅವರು ತಮ್ಮ ಬದುಕಿನಲ್ಲಿ ಸಹಕಾರಿಯಾಗಿ ಯಾವ ರೀತಿಯಾಗಿ ಕೆಲಸ ಮಾಡುತ್ತಿದ್ದೆ ಎಂದವರು ನನಗೆ ವಿವರಿಸುತ್ತಿದ್ದರು. ಆಗ ನಾನು ಅವರಿಗೆ ಹೇಳಿದ್ದು ಏನೆಂದರೆ, ನಮ್ಮ ಎರಡು ಜಿಲ್ಲೆಗಳಲ್ಲಿ ಮಳವಳ್ಳಿ ಶಿವರಾಯರು ಎಂದು ಹೇಳಿದರೆ ಪ್ರತಿ ಸಹಕಾರಿ ಕ್ಷೇತ್ರದ ಸಹಕಾರಿ ಸಂಘಗಳಲ್ಲಿ ಅವರ ಫೋಟೋ ಇದ್ದೇ ಇರುತ್ತದೆ ಎನ್ನುವುದನ್ನು ನಾವು ಗಮನಿಸಿದಾಗ ಅಂತಹ ಹಿರಿಯರ ಸಾಲಿಗೆ ಸೇರಬಹುದಾದಂತಹ ವ್ಯಕ್ತಿತ್ವ ನಮ್ಮ ಶ್ರೀ ಎಸ್.ಎಲ್. ಧರ್ಮೇಗೌಡರದ್ದು ಎಂದು ನನಗೆ ಅನಿಸುತ್ತದೆ. ಶ್ರೀಯುತರು, ಚಿಕ್ಕಮಗಳೂರಿನ ಬಿಲೇಕಲ್ಲಹಳ್ಳಿ ಮಂಡಲ ಪಂಚಾಯಿತಿಯ ಸದಸ್ಯರಾಗಿ ನಂತರ ಮಂಡಲ ಪಂಚಾಯಿತಿಯ ಪ್ರಧಾನ ಹುದ್ದೆಯಿಂದ ಪ್ರಾರಂಭವಾಗಿ ವಿಧಾನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಷತ್ತಿನ ಸದಸ್ಯರಾಗಿ, ಉಪ ಸಭಾಪತಿಯವರೆಗೆ ಅವರು ಹಾಕಿಕೊಂಡಂತಹ ರಾಜಕಾರಣದ ಹೆಜ್ಜೆಗಳು ಮತ್ತು ಅವರು ಸಹಕಾರಿ ಕ್ಷೇತ್ರದಲ್ಲಿ ಮಾಡಿರುವಂತಹ ಶ್ರಮದ ಕೆಲಸಗಳು, 37 ವರ್ಷಗಳ ಕಾಲ ಟಿ.ಎ.ಪಿ.ಸಿ.ಎಂ.ಎಸ್. ಗೆ ನಿರ್ದೇಶಕರಾಗಿ, ನಂತರ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿರುತ್ತಾರೆ. ಹಾಸನದ ಹಾಲು ಒಕ್ಕೂಟದ ನಿರ್ದೇಶಕರಾಗಿ 26 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರುತ್ತಾರೆ. ನಂತರ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿರುತ್ತಾರೆ. ಮಿಲ್ಕ್ ಫೆಡರೇಷನ್‌ನಲ್ಲಿ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿರುತ್ತಾರೆ. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ. 32 ವರ್ಷಗಳ ಕಾಲ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ. 30 ವರ್ಷಗಳು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಲದ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ದೆಹಲಿಯ ರಾಷ್ಟ್ರೀಯ ಇಫ್ಕೋ, ನಾಫೆಡ್, ಎನ್‌ಸಿಡಿಸಿ, ಐಪಿಸಿಎಲ್ ನಂತಹ ಉನ್ನತ ಸಂಸ್ಥೆಗಳಲ್ಲೂ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಸಹಕಾರಿ ಕ್ಷೇತ್ರದಲ್ಲಿ ಅವಿರತ ಸೇವೆ ಸಲ್ಲಿಸುವ ಮೂಲಕ ತಮ್ಮದೇ ಆದ ಛಾಪು ಮೂಡಿಸಿದ್ದ ಶ್ರೀಯುತರಿಗೆ "ಸಹಕಾರಿ ಸೇವಾ ರತ್ನ" ಪ್ರಶಸ್ತಿ ಪ್ರಾಪ್ತವಾಗಿರುತ್ತದೆ. ಇಡೀ ಸಮಾಜ ಒಟ್ಟಾಗಿ ಅವರನ್ನು ಗೌರವಿಸುತ್ತದೆ. ನಮ್ಮಗಳ ನಡುವೆ ಬೆಳೆದು, ನಮಗೆಲ್ಲಾ ಮಾರ್ಗದರ್ಶನ ಮಾಡಿದಂತಹ ಮಾನ್ಯ ಶ್ರೀ ಧರ್ಮೇಗೌಡರವರು ನನ್ನ ದೃಷ್ಟಿಯಲ್ಲಿ ಧರ್ಮರಾಯರಂತೆ ಸಮಾಜದಲ್ಲಿ ಬದುಕಿ ಬಾಳಿದಂತಹವರು ಎಂದು ನಾನು ತಿಳಿದುಕೊಂಡಿದ್ದೇನೆ. ರಾಜಧರ್ಮದ ರಾಜಕಾರಣವನ್ನು ಮಾಡಿದಂತಹ ಶ್ರೀ ಧರ್ಮೇಗೌಡರ ನಿಧನಕ್ಕಾಗಿ ತಮ್ಮ ಸಮಕ್ಷಮ ಭಾವುಕತೆಯ ಸಂತಾಪವನ್ನು ಸೂಚನೆ ಮಾಡುತ್ತೇನೆ.

**(ಮುಂದುವರೆದಿದೆ)**

**(04) 28.01.2021 01.10 ಎಸ್‌ವಿ-ವಿಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**

ಮಾನ್ಯ ಸಭಾಪತಿಯವರೇ, ಶ್ರೀ ಜಯವಂತ ಪ್ರೇಮಾನಂದ ಸುಬ್ರಾಯರ ಬಗ್ಗೆ ತಾವು ಸಂತಾಪ ಸೂಚನೆಯಲ್ಲಿ ಉಲ್ಲೇಖ ಮಾಡಿರುತ್ತೀರಿ. ಇವರು ಉತ್ತರ ಕನ್ನಡ ಜಿಲ್ಲೆಯ ಶಿರಸಿ ವಿಧಾನ ಸಭಾ ಕ್ಷೇತ್ರದಿಂದ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ದಿವಂಗತ ಶ್ರೀ ಜೆ.ಹೆಚ್.ಪಟೇಲರ ಸಚಿವ ಸಂಪುಟದಲ್ಲಿ ಅಬಕಾರಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಅನೇಕ ಸಹಕಾರ ಸಂಘಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ದೇಶಕರಾಗಿ ಕೆಲಸವನ್ನು ಮಾಡಿದ್ದರು. ಮೊಗೇರ ಸಮಾಜದಲ್ಲಿ ಜನಿಸಿದ ಇವರು ಸಮಾಜದ ಏಳಿಗೆಗಾಗಿ ಅಹರ್ನಿಶಿ ದುಡಿದಿದ್ದರು. ಅವರ ಸೇವೆಗಾಗಿ ರಾಜೀವ್‌ಗಾಂಧಿ ಎಕ್ಸಲೆನ್ಸಿ ಪ್ರಶಸ್ತಿಗೆ ಭಾಜನರಾಗಿದ್ದರು. ಇಂತಹ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಹ ಅನುಭವ ನಮಗಾಗಿದೆ. ದಿವಂಗತ ಜಯವಂತ ಪ್ರೇಮಾನಂದ ಸುಬ್ರಾಯರವರ ನಿಧನದ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್ ಇವರು ದಿವಂಗತ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಕ್ರೀಡಾ ಮತ್ತು ರೇಷ್ಮೆ ಸಚಿವರಾಗಿ ಕೆಲಸ ಮಾಡಿದಂತಹ ನೆನಪು ನನಗಿದೆ. ಬಿ.ಎ. ಪದವೀಧರರಾದ ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಕೋಲಾರ ಜಿಲ್ಲೆಯ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಂತಹ ಇವರು ಸಾಮಾನ್ಯರಂತೆ ಬೆಳೆದು ಬಂದು ರಾಜ್ಯದಲ್ಲಿ ಶಾಸಕಿಯಾಗಿ, ಮಂತ್ರಿಯಾಗಿ ಕಾರ್ಯನಿರ್ವಹಿಸಿದಂತಹ ಒಬ್ಬ ಹಿರಿಯ ರಾಜಕಾರಣಿಯಾಗಿದ್ದು, ಇವರ ನಿಧನದಿಂದ ನಾವು ಓರ್ವ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ. ಇವರ ಸಂತಾಪ ಸೂಚನಾ ಪ್ರಸ್ತಾವಕ್ಕೆ ನನ್ನ ಸಹಮತವಿದೆ.

ಶ್ರೀ ಮಲ್ಲಪ್ಪ ಚನ್ನವೀರಪ್ಪ ಮನಗೂಳಿ ಇವರೊಂದಿಗೆ ಮೊನ್ನೆ ಮೊನ್ನೆಯವರೆವಿಗೂ ಈ ಸದನದಲ್ಲಿ ಮಾತನಾಡಿದ್ದೇವೆ. ಅವರೊಡನೆ ತೋಟಗಾರಿಕೆ ಇಲಾಖೆಯ ವಿಚಾರಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡಿದ್ದೆನು. ಸಿಂಧಗಿಯಲ್ಲಿ ಜನಿಸಿದ ಇವರು ಕೃಷಿ ವಿಷಯದಲ್ಲಿ ಡಿಪ್ಲೊಮಾ ವ್ಯಾಸಂಗವನ್ನು ಮಾಡಿ ಸ್ವತಃ ವೃತ್ತಿಯಲ್ಲಿ ಕೃಷಿಕರಾಗಿದ್ದರು. ಇವರು ಸಹಕಾರ ಕ್ಷೇತ್ರದಲ್ಲಿ ಅಪಾರವಾದ ಕೆಲಸವನ್ನು ಮಾಡಿರುವುದಲ್ಲದೆ ನಾವೆಲ್ಲಾ ಪ್ರೀತಿಯಿಂದ ಗಮನಿಸುವಂತಹ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿಯೂ ಸಹ ಅವರು ಕೆಲಸವನ್ನು ಮಾಡಿದ್ದಾರೆ. 2018ರಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರವಿದ್ದಾಗ ತೋಟಗಾರಿಕಾ ಸಚಿವರಾಗಿ ನಗುನಗುತ್ತಾ ನಮ್ಮೆಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ, ನಮ್ಮ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಟ್ಟಂತಹ ಹಿರಿಯ ರಾಜಕಾರಣಿಗಳಲ್ಲಿ ಶ್ರೀ ಎಂ.ಸಿ.ಮನಗೂಳಿಯವರು ಒಬ್ಬರು. ಅಂತಹ ಹಿರಿಯ ರಾಜಕಾರಣಿಗೆ ನನ್ನ ಗೌರವವನ್ನು ಸಲ್ಲಿಸಿ ತಮ್ಮ ಸಂತಾಪಸೂಚನಾ ಪ್ರಸ್ತಾಪಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಅವರ ನಿಧನದಿಂದಾಗಿ ಓರ್ವ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ ಎನ್ನುವ ತಮ್ಮ ಭಾವನೆಗೆ ನನ್ನ ಸಹಮತವಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಬನ್ನಂಜೆ ಗೋವಿಂದಾಚಾರ್ಯರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಅವರ ಬಗ್ಗೆ ಮಾಡಿರುವ ಸುದೀರ್ಘವಾದ ಉಲ್ಲೇಖದಲ್ಲಿ ತಾವು ಹೇಳಿರುವಂತಹ ಒಂದೊಂದು ಅಂಶವೂ ಸ್ಪಷ್ಟವಾಗಿದೆ. ಅವರು ನಿಧನರಾದಾಗ 'ಆಧ್ಯಾತ್ಮ ಲೋಕದ ಆಲದ ಮರವೊಂದು ಉರುಳಿತು' ಎಂದು ಪತ್ರಿಕೆಗಳ ತಲೆಬರಹದಲ್ಲಿ ಪ್ರಕಟವಾಗಿತ್ತು. ಅಷ್ಟೊಂದು ಅಗಾಧವಾದ ಅನುಭವ, ಸ್ಫುಟವಾದ ಮಾತುಗಳು ಅವರದ್ದು. ರಾಮಾಯಣವಿರಲಿ, ಮಹಾಭಾರತವಿರಲಿ, ಪ್ರಾಪಂಚಿಕವಾದ ಯಾವುದೇ ಆಧ್ಯಾತ್ಮಿಕ ವಿಷಯವಾಗಿರಲಿ ಅದರ ಬಗ್ಗೆ ಬಹಳ ಗಟ್ಟಿತನದ ಹಕ್ಕಿನ ಮಾತುಗಳನ್ನಾಡುವ ಅನುಭವವನ್ನು ಅವರು ಹೊಂದಿದ್ದರು. ಅತ್ಯಂತ ಹಿರಿಯ ವಿದ್ವಾಂಸರು. ಉಡುಪಿ ಜಿಲ್ಲೆಯ ಅಂಬಲಪಾಡಿಯಂತಹ ಒಂದು ಸಣ್ಣ ಗ್ರಾಮದಲ್ಲಿ ಜನಿಸಿ ಸಂಸ್ಕೃತದ ಪ್ರಕಾಂಡ ಪಂಡಿತರಾಗಿ, ಅಪ್ರತಿಮ ವಿದ್ವಾಂಸರಾಗಿ, ಖ್ಯಾತ ಪ್ರವಚನಕಾರರಾಗಿ, ಭಾಷಾಂತರಕಾರರಾಗಿ ಸಾರ್ಥಕ ಬದುಕನ್ನು ನಡೆಸಿದ ಹಿರಿಯರು ಎಂದು ನನ್ನ ಭಾವನೆ. ಅವರು ಒಬ್ಬ ಶ್ರೇಷ್ಠ ಕವಿಯಾಗಿ, ಚಿಂತಕರಾಗಿ, ಲೇಖಕರಾಗಿ, ವಿಮರ್ಶಕರಾಗಿ ತಮ್ಮ ಛಾಪು ಮೂಡಿಸಿದ್ದರು. ಹಲವು ದಿನಪತ್ರಿಕೆಗಳಲ್ಲಿ ತಮ್ಮ ಲೇಖನಗಳನ್ನು ಬರೆಯುತ್ತಿದ್ದರು. ದಾಸಸಾಹಿತ್ಯದ ಪರಂಪರೆಯ ಮೇಲೆ ಬಹಳ ಗಾಢವಾದಂತಹ ಅಧ್ಯಯನವನ್ನು ಮಾಡಿದ್ದರು. ಅನೇಕ ಕನ್ನಡ ಕೃತಿಗಳನ್ನು ರಚಿಸಿದ್ದರು. ಬಾಣಭಟ್ಟನ ಕಾದಂಬರಿ, ಕಾಳಿದಾಸನ ಅಭಿಜ್ಞಾನ ಶಾಕುಂತಲ, ಶೂದ್ರಕನ ಮೃಚ್ಛಕಟಿಕ ಇತ್ಯಾದಿ ಚಾರಿತ್ರಿಕ ಕೃತಿಗಳನ್ನು ಕನ್ನಡದಲ್ಲಿ ರಚಿಸಿ ಸಮಾಜಕ್ಕೆ ಸಮರ್ಪಣೆ ಮಾಡಿದ್ದರು. ಅನೇಕ ವಿಚಾರಗಳ ಕುರಿತು ಅವರ ಬಳಿ ಅನುಭವಗಳನ್ನು ಕೇಳಲಿಕ್ಕೆ ನಾವು ಹೋಗುತ್ತಿದ್ದೆವು. 'ರಾಮಾನುಜಾಚಾರ್ಯ' ಎಂಬ ಸಂಸ್ಕೃತ ಚಲನಚಿತ್ರಕ್ಕೆ ಸಂಭಾಷಣೆಯನ್ನು ಕೂಡ ನೀಡಿದ್ದರು. ಸಮಾಜಕ್ಕೆ ಜ್ಞಾನದ ಸುಧೆಯನ್ನು ಉಣಿಸಿದಂತಹ ಬನ್ನಂಜೆಯವರು ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಮಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಗಳಿಗೆ ಭಾಜನರಾಗಿದ್ದರು. ಪಂಡಿತರತ್ನ ಎನ್ನುವ ಪ್ರಶಸ್ತಿಯು ಸಹ ಇವರಿಗೆ ಲಭಿಸಿತ್ತು. 'ಆಧ್ಯಾತ್ಮಿಕ ಲೋಕದ ನಡೆದಾಡುವ ವಿಶ್ವಕೋಶ' ಎಂದು ಕರೆಯಬಹುದಾದ ಅತ್ಯಂತ ಹಿರಿಯರಲ್ಲಿ ಬನ್ನಂಜೆ ಗೋವಿಂದಾಚಾರ್ಯರೂ ಒಬ್ಬರು. ಸಾರಸ್ವತ ಲೋಕದ ಒಬ್ಬ ಹಿರಿಯ ವಿದ್ವಾಂಸರನ್ನು ನಾವು ಕಳೆದುಕೊಂಡಂತಾಗಿದೆ ಎನ್ನುವ ತಮ್ಮ ಮಾತಿಗೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಪ್ರೊ:ರೊದ್ದಂ ನರಸಿಂಹ ಇವರಿಗೆ ಪದ್ಮವಿಭೂಷಣ ಮತ್ತು ಪದ್ಮಭೂಷಣ ಪ್ರಶಸ್ತಿಗಳೆರಡೂ ಲಭಿಸಿತ್ತು. ವೈಮಾನಿಕ ವಿಜ್ಞಾನ ಹಾಗೂ ದ್ರವಚಲನಾ ಶಾಸ್ತ್ರದ ವಿಜ್ಞಾನಿಗಳಾಗಿದ್ದ ರೊದ್ದಂ ನರಸಿಂಹ ಅವರು ನಿಧನರಾಗಿದ್ದು, ಹಿರಿಯ ವಿಜ್ಞಾನಿಗಳೊಬ್ಬರನ್ನು ಕಳೆದುಕೊಂಡು ನಮ್ಮ ದೇಶ ಬಹು ದೊಡ್ಡ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಷ್ಟವನ್ನು ಅನುಭವಿಸಿದೆ ಎಂದು ನನಗನ್ನಿಸುತ್ತದೆ. ಪರಿಸರ ವಿಜ್ಞಾನ ಕೇಂದ್ರದ ಸಂಸ್ಥಾಪಕರಾಗಿ, ಭಾರತೀಯ ವಿಜ್ಞಾನ ಸಂಸ್ಥೆಯ ಏರೋಸ್ಪೇಸ್ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿ, ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ನಿರ್ದೇಶಕರಾಗಿ, ಜವಹರಲಾಲ್ ನೆಹರು ಕೇಂದ್ರದ ಇಂಜಿನಿಯರಿಂಗ್ ಮೆಕ್ಯಾನಿಕ್ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಏರೋಸ್ಪೇಸ್ ಫ್ಲೂಯಿಡ್ ಡೈನಮಿಕ್ಸ್, ಮೋಡಗಳ ರಚನೆ ಕುರಿತು ಅಂತರ ರಾಷ್ಟ್ರೀಯ ಮಟ್ಟದ ಸಂಶೋಧನೆಯು ಇಡೀ ರಾಷ್ಟ್ರಕ್ಕೆ ಮಾದರಿಯಾಗುವಂತಿದೆ. 200ಕ್ಕೂ ಹೆಚ್ಚು ಸಂಶೋಧನಾ ಗ್ರಂಥಗಳನ್ನು ರಚನೆ ಮಾಡಿ ಅವುಗಳನ್ನು ಪ್ರಕಟಿಸಿ ಇಂದಿನ ಯುವ ವಿಜ್ಞಾನಿಗಳಿಗೆ ಮಾರ್ಗದರ್ಶಕರಾಗಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಅಪಾರವಾದಂತಹ ಸೇವೆಯನ್ನು ಸಲ್ಲಿಸಿರುವ ಶ್ರೀಯುತರಿಗೆ ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳು ಲಭಿಸಿದ್ದವು. ಇನ್ನೂ ಹಲವಾರು ಪ್ರಶಸ್ತಿಗಳು ಅವರ ಪಾಲಿಗೆ ಬಂದಿದ್ದವು. ಈ ಮೂಲಕ ಪ್ರೊ.ರೊದ್ದಂ ನರಸಿಂಹ ಅವರ ನಿಧನಕ್ಕೆ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಆರ್.ಎನ್.ಶೆಟ್ಟಿ ಎಂದು ನಾವೆಲ್ಲಾ ಕರೆಯುವ ನಾಡಿನ ಶ್ರೇಷ್ಠ ಉದ್ಯಮಿಗಳಾದ ರಾಮ ನಾಗಪ್ಪ ಶೆಟ್ಟಿಯವರು ನಿಧನರಾಗಿದ್ದಾರೆ. ಮುರುಡೇಶ್ವರ ಎಂದ ಕೂಡಲೇ ನಮಗೆ ನೆನಪಾಗುವುದು ಆರ್.ಎನ್.ಶೆಟ್ಟಿಯವರು. ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಜನಿಸಿದ ಅವರು ಕೃಷಿ ಕುಟುಂಬದಿಂದ ಬಂದವರಾಗಿದ್ದು, ಸ್ವಲ್ಪವೇ ಶಿಕ್ಷಣವನ್ನು ಪಡೆದು ಗುತ್ತಿಗೆದಾರರಾಗಿ ತಮ್ಮ ಜೀವನವನ್ನು ಪ್ರಾರಂಭ ಮಾಡುತ್ತಾರೆ. ತಮ್ಮ ದುಡಿಮೆಯನ್ನು ಸಮಾಜಕ್ಕೆ ಸಮರ್ಪಣೆ ಮಾಡುವವರು ಅತಿ ವಿರಳ ಎನ್ನುವ ಕಾಲಘಟ್ಟದಲ್ಲಿ ಆರ್.ಎನ್.ಶೆಟ್ಟಿಯವರಿಂದ ಪ್ರಯೋಜನ ಪಡೆಯದಿರುವವರೇ ವಿರಳ ಎನ್ನುವ ಮಟ್ಟಿಗೆ ಅವರ ವ್ಯಕ್ತಿತ್ವ ಬೆಳೆದಿತ್ತು. ಮುರುಡೇಶ್ವರದಲ್ಲಿ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ದೇವಸ್ಥಾನದ ಸ್ವಾಗತ ಗೋಪುರವನ್ನು ನಿರ್ಮಾಣ ಮಾಡಿರುವುದನ್ನು ನಾವು ಇಂದಿಗೂ ಕಾಣಬಹುದು. ಶೈಕ್ಷಣಿಕ ಕ್ಷೇತ್ರವೂ ಸೇರಿದಂತೆ ಸುಮಾರು 24 ಸಂಸ್ಥೆಗಳನ್ನು ಅವರು ಪ್ರಾರಂಭ ಮಾಡಿದ್ದರು. ಹತ್ತಾರು ಸಾವಿರ ಜನರಿಗೆ ಖಾಯಂ ಉದ್ಯೋಗವನ್ನು ನೀಡಿದ್ದರು. ಸೌರ, ಗಾಳಿ ವಿದ್ಯುತ್ ಘಟಕಗಳನ್ನು ನಿರ್ಮಾಣ ಮಾಡಿದ್ದರು. ಒಟ್ಟಾರೆ ಮುರುಡೇಶ್ವರ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಯಾರು ಕಾರಣರು ಎಂದರೆ, ಅದು ಆರ್.ಎನ್.ಶೆಟ್ಟಿ ಎನ್ನುವ ಭಾವನೆ ನಮ್ಮಲ್ಲಿದೆ. ಇಲ್ಲಿಂದ ಹುಬ್ಬಳ್ಳಿಗೆ ಹೋಗಿ ಅನೇಕ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದರು. ನಂತರ ಬಹು ದೊಡ್ಡ ಗುತ್ತಿಗೆದಾರರಾದರು. ದೇಶದಲ್ಲಿ 'ಮಾರುತಿ ಉದ್ಯೋಗ್'ನ ಸಹಭಾಗಿತ್ವದಲ್ಲಿ 'ಆರ್.ಎನ್.ಶೆಟ್ಟಿ ಮೋಟಾರ್ಸ್' ಎನ್ನುವ ಷೋರೂಂ ಅನ್ನು ಪ್ರಾರಂಭಿಸಿದರು. ಹೀಗೆ ಸರ್ಕಾರದ ಜೊತೆಯಲ್ಲಿ, ಸಮಾಜದ ಜೊತೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜಕ್ಕೆ ಅಪಾರವಾದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುಗೆಯನ್ನು ನೀಡಿದಂತಹ ಶ್ರೀ ಆರ್.ಎನ್.ಶೆಟ್ಟಿಯವರಿಗೆ 'ಕೈಗಾರಿಕಾ ರತ್ನ' ಪ್ರಶಸ್ತಿಯನ್ನು ನೀಡಲಾಗಿತ್ತಲ್ಲದೆ ಇನ್ನಿತರ ಅನೇಕ ಪ್ರಶಸ್ತಿ–ಪುರಸ್ಕಾರಗಳು ಸಹ ಅವರಿಗೆ ಲಭಿಸಿದ್ದವು. ಅತ್ಯಂತ ಖ್ಯಾತ ಉದ್ಯಮಿಯಾಗಿದ್ದ, ಸಮಾಜದ ಚಿಂತಕರಾಗಿದ್ದ ಶ್ರೀ ಆರ್.ಎನ್.ಶೆಟ್ಟಿಯವರ ನಿಧನದ ಸಂತಾಪಕ್ಕೆ ನನ್ನ ಸಹಮತವನ್ನು ಸೂಚಿಸುತ್ತೇನೆ.

ಶಾಸಕರು, ಮಂತ್ರಿಗಳು, ರಾಜಕಾರಣಿಗಳ ನಡುವೆ ಶ್ರೀಮತಿ ಮಹಾದೇವಿ ಅಣ್ಣಾರಾವ್ ಪಣದೆ ಇವರ ಸಂತಾಪಸೂಚನಾ ಪ್ರಸ್ತಾವವನ್ನು ತಂದಿದ್ದೀರಿ. ಕೃಷಿ ಸಾಧಕಿಯಾದ ಇವರು ಮೂರು ಎಕರೆ ಜಾಗದಲ್ಲಿ ಪುಷ್ಪ ಕೃಷಿಯನ್ನು ಮಾಡಿ ಕ್ರಾಂತಿಯನ್ನು ಮಾಡಿದಂತಹ ಒಬ್ಬ ಶ್ರೇಷ್ಠ ಕೃಷಿಕರೊಬ್ಬರ ನಿಧನಕ್ಕೆ ಈ ಸದನವು ಸಂತಾಪ ಸೂಚನೆ ಮಾಡಬೇಕೆನ್ನುವ ತಮ್ಮ ಭಾವನೆಗೆ ನಾನು ಸಹಮತವನ್ನು ವ್ಯಕ್ತ ಪಡಿಸುತ್ತೇನೆ.

ಸ್ವಾಮಿ ಹರ್ಷಾನಂದ ಮಹಾರಾಜ್ ಅವರು ರಾಮಕೃಷ್ಣ ಮಠದ ಅಧ್ಯಕ್ಷರು. ಶ್ರೀ ರಾಮಕೃಷ್ಣ ಮಠದ ಬಗ್ಗೆ ನಾವು ತಿಳಿದುಕೊಂಡಿರುವುದು ಕಡಿಮೆ ಎಂದು ನನಗನ್ನಿಸುತ್ತದೆ. ಯಾವಾಗಲೂ ನಾನು ಅಲ್ಲಿಗೆ ಹೋದಾಗ ಹೊಸ ಹೊಸ ವಿಚಾರಗಳು ತಿಳಿಯುತ್ತದೆ. ರಾಮಕೃಷ್ಣ ಮಠದ ಅನೇಕ ಶಾಖಾ ಮಠಗಳಲ್ಲಿ ಗ್ರಾಮಗಳನ್ನು ಸ್ವಚ್ಛ ಮಾಡುವ 'ಸ್ವಚ್ಛ ಭಾರತ್ ಯೋಜನೆ' ಗೆ ಕಲ್ಪನೆಯನ್ನು ನೀಡಿ, ಸ್ವಚ್ಛತೆ ಮತ್ತು ಒಟ್ಟು ವ್ಯವಸ್ಥೆಗಳ ಬಗ್ಗೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡುವಲ್ಲಿ ಶ್ರೀ ರಾಮಕೃಷ್ಣ ಮಠ ಮುಂದು ಎಂದು ನನಗನ್ನಿಸುತ್ತದೆ. ಬಸವನಗುಡಿಯ ಶ್ರೀ ರಾಮಕೃಷ್ಣ ಮಠದಲ್ಲಿ ಆಧ್ಯಾತ್ಮ ಜೀವನವನ್ನು ಪ್ರಾರಂಭ ಮಾಡಿದಂತಹ ಸ್ವಾಮಿ ಹರ್ಷಾನಂದರು ಮಧ್ಯಪ್ರದೇಶದಲ್ಲಿ ಜನಿಸಿದರು. ಕರ್ನಾಟಕ ರಾಜ್ಯದಲ್ಲಿ ನಮ್ಮೆಲ್ಲರ ಮಧ್ಯೆ ತಮ್ಮ ಇಡೀ ಬದುಕನ್ನು ಕಳೆದರು. ಸನಾತನ ಧರ್ಮಕ್ಕೆ ಸಂಬಂಧಪಟ್ಟಂತಹ ಅನೇಕ ಕೃತಿಗಳನ್ನು ಅವರು ರಚನೆ ಮಾಡಿದ್ದಾರೆ. ರಾಮಕೃಷ್ಣ ಮಠದ ಬಗ್ಗೆ ನನಗೆ ಇರುವ ಗೌರವವೇನೆಂದರೆ ಕೋವಿಡ್ ಸಂದರ್ಭದಲ್ಲಿ ಸಂತ್ರಸ್ತರಾದವರಿಗೆ, ಅನಾಥರಿಗೆ, ರಸ್ತೆ ಬದಿಯಲ್ಲಿ ಮಲಗಿ ಹೇಗೆ ಇಂದಿನ ದಿನವನ್ನು ದೂಡುವುದು ಎಂದು ಯೋಚನೆ ಮಾಡುವಂತಹ ಬಡವರಿಗೆ ರಾಮಕೃಷ್ಣ ಮಠದವರು ಊಟೋಪಚಾರಗಳನ್ನು ಮಾಡಿದ್ದರು. ಶ್ರೀ ರಾಮಕೃಷ್ಣ ಮಠವನ್ನು ಮುನ್ನಡೆಸಿದಂತಹ ಸ್ವಾಮಿ ಹರ್ಷಾನಂದ ಮಹಾರಾಜರ ನಿಧನಕ್ಕಾಗಿ ತಾವು ತಂದಿರುವ ಸಂತಾಪ ಸೂಚನಾ ಪ್ರಸ್ತಾವಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇದರಿಂದಾಗಿ ರಾಜ್ಯವು ಒಬ್ಬ ಧಾರ್ಮಿಕ, ಸೈದ್ಧಾಂತಿಕ ಗುರುವನ್ನು ಕಳೆದುಕೊಂಡಂತಾಗಿದೆ ಎಂದು ನಾನು ಭಾವಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಗುಲಾಮ್ ಮುಸ್ತಫಾ ಖಾನ್ ಇವರು ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. ಅವರ ಶ್ರಮ ಮತ್ತು ಸಮರ್ಪಣಾ ಮನೋಭಾವದ ದುಡಿಮೆ, ಸಂಗೀತದಲ್ಲಿ ಅವರಿಗಿದ್ದ ಪ್ರೌಢಿಮೆಯು ಚಾರಿತ್ರಿಕವಾದುದು ಎಂದು ನನಗನ್ನಿಸುತ್ತದೆ. ಉತ್ತರಪ್ರದೇಶದ ಬದೌನ್‌ನಲ್ಲಿ ಜನಿಸಿದ ಶ್ರೀಯುತರು ಪೂರ್ಣಪ್ರಮಾಣದ ಶಾಸ್ತ್ರೀಯ ಸಂಗೀತಕ್ಕೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ತಮ್ಮ ಎಂಟನೆಯ ವಯಸ್ಸಿನಲ್ಲಿ ಸಾರ್ವಜನಿಕ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಮರಾಠಿ ಮತ್ತು ಗುಜರಾತಿ ಚಿತ್ರಗಳಿಗೆ ಹಿನ್ನೆಲೆ ಗಾಯಕರಾಗಿದ್ದರು. ಅನೇಕ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬರುತ್ತವೆ. 70ಕ್ಕೂ ಹೆಚ್ಚು ಸಾಕ್ಷ್ಯಚಿತ್ರಗಳಿಗೆ ಅವರು ಕಂಠದಾನ ಮಾಡಿದ್ದರು. ಖ್ಯಾತ ಗಾಯಕರಾದ ಶ್ರೀಮತಿ ಆಶಾ ಭೋಸ್ಲೆ ಅವರಿಗೆ ಅವರು ಗುರುಗಳಾಗಿದ್ದರು. ಸಂಗೀತ ಲೋಕಕ್ಕೆ ಅಪಾರವಾದಂತಹ ಸೇವೆಯನ್ನು ಸಲ್ಲಿಸಿದಂತಹ ಶ್ರೀ ಗುಲಾಮ್ ಮುಸ್ತಫಾ ಖಾನ್ ಅವರು ಸಂಗೀತ ನಾಟಕ ಅಕಾಡೆಮಿ, ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಪ್ರಶಸ್ತಿಗಳಿಗೆ ಭಾಜನರಾಗಿರುವುದು ಚಾರಿತ್ರಿಕವಾದ ವಿಷಯ ಎಂಬುದನ್ನು ಉಲ್ಲೇಖಿಸುತ್ತಾ, ಶ್ರೀಯುತರ ನಿಧನದ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಒಟ್ಟಾರೆ ಮೇಲಿನ ಎಲ್ಲಾ ಸಂತಾಪ ಸೂಚನಾ ಪ್ರಸ್ತಾವಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಶ್ರೀಯುತರಾದ ಎಸ್.ಎಲ್.ಧರ್ಮೇಗೌಡರ ಆತ್ಮಕ್ಕೆ ಮತ್ತು ಎಲ್ಲಾ ಹಿರಿಯರ ಆತ್ಮಗಳಿಗೆ ಶ್ರೀದೇವರು ಸದ್ಗತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**(...ಮುಂದು)**

(05) 28.01.2021, 1.20. KG.BNS

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ನಮ್ಮನ್ನು ಅಗಲಿದಂತಹ 10 ದಿವ್ಯ ಚೇತನಗಳನ್ನು ಕುರಿತು ಸಂತಾಪ ಸೂಚನೆಗಳನ್ನು ಮಂಡಿಸಿ ಅವರ ಬಗೆಗಿನ ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದೀರಿ. ತಾವು ಹೇಳಿದಂತಹ ಎಲ್ಲಾ ವಿಚಾರಗಳನ್ನು ಅಕ್ಷರಶಃ ಒಪ್ಪಿಕೊಂಡು ನಾನು ಕೆಲವು ವಿಚಾರಗಳನ್ನು ತಮ್ಮ ವಿಚಾರಗಳಿಗೆ ಜೋಡಿಸುವುದಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊಟ್ಟ ಮೊದಲನೆಯದಾಗಿ, ನಮ್ಮನ್ನು ಅಗಲಿದಂತಹ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಗಳಾಗಿದ್ದ ಶ್ರೀ ಎಸ್.ಎಲ್.ಧರ್ಮೇಗೌಡರವರ ಬಗ್ಗೆ ಅತ್ಯಂತ ಭಾರವಾದ ಹೃದಯದಿಂದ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನನಗೆ ಏನೋ ಒಂದು ಅನಾಥ ಪ್ರಜ್ಞೆ ಕಾಡುತ್ತಿದೆ. ನಾನು ಪ್ರತಿಪಕ್ಷದ ನಾಯಕನಾಗಿ ಅಧಿವೇಶನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಂತಹ ಸಂದರ್ಭದಲ್ಲಿ ಶ್ರೀ ಎಸ್.ಎಲ್.ಧರ್ಮೇಗೌಡರವರು ನನ್ನ ಪಕ್ಕದ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಪ್ರತಿ ಅಧಿವೇಶನದಲ್ಲೂ ಅವರು ಜೊತೆಯಲ್ಲಿದ್ದಾಗ, ನಮ್ಮಲ್ಲಿ ಉಭಯ ಕುಶಲೋಪರಿ ಕೇಳುವಂತಹ ವಾಡಿಕೆ ಇತ್ತು. ಇವತ್ತಿನ ದಿವಸ ಶ್ರೀ ಎಸ್.ಎಲ್.ಧರ್ಮೇಗೌಡರವರು ಇಲ್ಲವೆನ್ನುವಂತಹ ನೋವು ನನ್ನನ್ನು ಬಹಳವಾಗಿ ಕಾಡುತ್ತಿದೆ.

ನಮ್ಮ ರಾಜ್ಯದಲ್ಲಿ ಪ್ರಥಮ ಬಾರಿಗೆ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ಬಂದಂತಹ ಸಂದರ್ಭದಲ್ಲಿ ಮಂಡಲ ಪಂಚಾಯಿತಿಗಳು ಅಸ್ತಿತ್ವದಲ್ಲಿವು. ಶ್ರೀಯುತರು ಮಂಡಲ ಪಂಚಾಯಿತಿಯ ಸದಸ್ಯರಿಂದ ಹಿಡಿದು ಶತಮಾನಗಳ ಇತಿಹಾಸವನ್ನು ಹೊಂದಿರುವಂತಹ ಈ "ಚಿಂತಕರ ಛಾವಡಿ"ಯಲ್ಲಿ ಉಪ ಸಭಾಪತಿಯಾಗಿ ಕರ್ತವ್ಯ ನಿರ್ವಹಿಸುವಷ್ಟರ ಮಟ್ಟಿಗೆ ಬೆಳೆದಂತಹ ಧೀಮಂತ ವ್ಯಕ್ತಿ. ಶ್ರೀಯುತರು ಬಹಳ ಮುಗ್ಧ ರಾಜಕಾರಣಿ ಎಂದು ಭಾವಿಸುತ್ತೇನೆ. ಅವರಿಗೆ ಯಾರಾದರೂ ಏನಾದರೊಂದು ಹೇಳಿದರೆ, ಅದಕ್ಕೆ ಇಲ್ಲವೆಂದು ಹೇಳುವಂತಹ ಮನೋಭಾವನೆ ಅವರಲ್ಲಿ ಇರಲಿಲ್ಲ. ಅವರ ಅಗಲಿಕೆ ನಿಜಕ್ಕೂ ಬಹಳ ದೊಡ್ಡ ಮಟ್ಟದಲ್ಲಿ ಹಾನಿಯಾಗಿದೆ. ಅದರಲ್ಲೂ ವಿಶೇಷವಾಗಿ, ಈ ಸದನಕ್ಕೆ ತುಂಬಲಾರದಂತಹ ನಷ್ಟವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಶ್ರೀಯುತರು ಮಂಡಲ ಪಂಚಾಯಿತಿಯ ಸದಸ್ಯರಾಗಿ, ಪ್ರಧಾನರಾಗಿ ಮತ್ತು ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ, ಸ್ಥಳೀಯ ಸಂಸ್ಥೆಗಳನ್ನು ಶಕ್ತಿಶಾಲಿ ಮಾಡುವುದರ ಜೊತೆಗೆ ಈ ನಾಡಿನ ಒಬ್ಬ ಶ್ರೇಷ್ಠ ಸಹಕಾರಿಯಾಗಿ ಕೆಲಸ ಮಾಡಿದ್ದಾರೆ. ಶ್ರೀಯುತರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಹಕಾರ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಮತ್ತು ನಿರ್ದೇಶಕರಾಗಿ ಕೆಲಸ ಮಾಡಿರುವುದರ ಜೊತೆಗೆ ರಾಜ್ಯ ಮಟ್ಟದ ಸಹಕಾರಿ ಸಂಸ್ಥೆಗಳಲ್ಲಿಯೂ ಸಹ ಕೆಲಸ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಶ್ರೀಯುತರು ರಾಷ್ಟ್ರ ಮಟ್ಟದ ಅತ್ಯಂತ ಪ್ರತಿಷ್ಠಿತ ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದನ್ನು ನೋಡಿದರೆ, ನಮಗೆ ಬಹಳ ಹೆಮ್ಮೆ ಎನಿಸುತ್ತದೆ. ನಾನು ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೇನೆ. ಶ್ರೀಯುತರು TAPCMS ನಿರ್ದೇಶಕರಾಗಿ ಸುಮಾರು 37 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅಲ್ಲದೇ, ಹಾಸನ ಜಿಲ್ಲಾ ಹಾಲು ಒಕ್ಕೂಟದಲ್ಲಿ ಸುಮಾರು 26 ವರ್ಷಗಳ ಕಾಲ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿರ್ದೇಶಕರಾಗಿದ್ದಲ್ಲದೇ, ಅದರ ಅಧ್ಯಕ್ಷರು ಸಹ ಆಗಿದ್ದರು. ಶ್ರೀಯುತರು ಚಿಕ್ಕಮಗಳೂರಿನ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ ಸುಮಾರು 32 ವರ್ಷಗಳ ಕಾಲ ಕೆಲಸ ಮಾಡಿದ್ದರು. ನಾನು ಸಹ ನನ್ನ ಜಿಲ್ಲೆಯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಶ್ರೀಯುತರು ಎರಡು ಬಾರಿ ಅಧ್ಯಕ್ಷರಾಗಿ ಕೆಲಸ ಮಾಡುವುದರ ಜೊತೆಗೆ, ನಮ್ಮ ರಾಜ್ಯದ ಪ್ರತಿಷ್ಠಿತ ಸಹಕಾರಿ ಬ್ಯಾಂಕ್ ಎಂದರೆ, ಅದು ಅಪೆಕ್ಸ್ ಬ್ಯಾಂಕ್. ನಾವು ಆ ಬ್ಯಾಂಕ್‌ನ್ನು ‘Mother Bank’ ಎಂದು ಹೇಳುತ್ತೇವೆ. ಶ್ರೀಯುತರು ಅಲ್ಲಿಯೂ ಸಹ ನಿರ್ದೇಶಕರಾಗಿ ಮತ್ತು ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರು ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ನಾನು ನಿರ್ದೇಶಕನಾಗಿದ್ದೆ. ಶ್ರೀಯುತರು ಅಂದಿನಿಂದ ನನಗೆ ಬಹಳ ಪರಿಚಿತರಾದವರು. ಹಾಗಾಗಿ, ಶ್ರೀಯುತರು ನನಗೆ ಬಹಳಷ್ಟು ಆತ್ಮೀಯ ಗೆಳೆಯರಾಗಿದ್ದರು. ನಮ್ಮ ದೇಶದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಗಮನ ಸೆಳೆಯುವಂತಹ ಸಂಸ್ಥೆಗಳಾದ IFFCO ಸಂಸ್ಥೆ, NAFED, NCDC, IPCL, ಇಂತಹ ಸಂಸ್ಥೆಗಳಲ್ಲಿಯೂ ಸಹ ನಿರ್ದೇಶಕರಾಗಿ ಶ್ರೀಯುತರು ಕೆಲಸ ಮಾಡಿದ್ದಾರೆ. ನಾವು IFFCO, KRIBHCO, ಈ ಸಂಸ್ಥೆಗಳಲ್ಲಿ ನಿರ್ದೇಶಕರಾಗುವುದು ಎಂದರೆ, ಅದು ಕನಸಿನ ಮಾತು. ಇವು ಅಂತಹ ಮಹಾನ್ ಸಂಸ್ಥೆಗಳು. ಶ್ರೀಯುತರು ಹಳ್ಳಿಯಿಂದ ಹಿಡಿದು ದಿಲ್ಲಿಯವರೆಗಿನ ಸಹಕಾರಿ ಕ್ಷೇತ್ರವನ್ನೇ ಶ್ರೀಮಂತಗೊಳಿಸುವಂತಹ ಕೆಲಸ ಮಾಡಿದ್ದಾರೆ. ಶ್ರೀಯುತರು “ಸಹಕಾರಿ ಸೇವಾ ರತ್ನ” ಪ್ರಶಸ್ತಿಗೂ ಸಹ ಭಾಜನರಾಗಿದ್ದರು.

ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಸಭಾಪತಿಯವರು ಇಷ್ಟುಬೇಗ ನಮ್ಮನ್ನು ಆಗಲಿ ಹೋಗುತ್ತಾರೆಂದು ನಾವು ನಮ್ಮ ಸದನದ ಸದಸ್ಯರು ಕನಸು ಮನಸ್ಸಿನಲ್ಲಿಯೂ ನೆನಸಿರಲಿಲ್ಲ. ಅವರ ಅಗಲಿಕೆಯಿಂದ ನಿಜವಾಗಿಯೂ ನಮ್ಮ ನಾಡಿನ “ಸಹಕಾರಿ ರತ್ನ” ಒಂದನ್ನು ಕಳೆದುಕೊಂಡಂತಾಗಿದೆ. ಅಲ್ಲದೇ, ಅವರ ಅಗಲಿಕೆಯಿಂದ ಸಹಕಾರಿ ಕ್ಷೇತ್ರ ಸ್ತಬ್ಧವಾಗಿದೆ ಎಂದು ಹೇಳಿದರೂ ಸಹ ತಪ್ಪಾಗಲಾರದು. ಮಾನ್ಯ ಸಭಾನಾಯಕರು ಹೇಳಿದಂತೆ, ಶ್ರೀಯುತರು ಅವರ ಹೆಸರಿಗೆ ತಕ್ಕಂತೆ ಅವರನ್ನು ಒಬ್ಬ “ಧರ್ಮರಾಜ” ಎಂದು ಹೇಳಿದರೆ ತಪ್ಪಾಗಲಾರದು. ಅಂತಹ ಒಬ್ಬ ಮುಗ್ಧ ಸರಳ ಸಜ್ಜನಿಕೆ ರಾಜಕಾರಣಿ ಹಾಗೂ ಸಹಕಾರಿ ಕ್ಷೇತ್ರದ ಧುರೀಣರೊಬ್ಬರ ಅಗಲಿಕೆ ನಮಗೆ ನಿಜವಾಗಲೂ ನೋವು ತಂದಿದೆ.

ಮಾನ್ಯ ಸಭಾಪತಿಯವರೇ, ತಾವು ಉಲ್ಲೇಖ ಮಾಡಿರುವಂತಹ “ಶ್ರೀ ಜೈವಂತ ಪ್ರೇಮಾನಂದ ಸುಬ್ರಾಯ್” ರವರು 1994 ರಲ್ಲಿ 10ನೇ ವಿಧಾನ ಸಭೆಗೆ ಶಿರಸಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಶ್ರೀಯುತರು genius Chief Minister ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಖ್ಯಾತರಾದಂತಹ ಮಾನ್ಯ ಜೆ.ಹೆಚ್.ಪಾಟೀಲ್‌ರವರ ಸಚಿವ ಸಂಪುಟದಲ್ಲಿ ಅಬಕಾರಿ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಶಿರಸಿಯ ಗಂಗಾ ಪರಮೇಶ್ವರಿ ಸಹಕಾರಿ ಸಂಸ್ಥೆಯ ಸಂಸ್ಥಾಪಕರಾಗಿ, ಮೊಗೇರಾ ಸಮಾಜ ಸಂಘದ ಜಿಲ್ಲಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀಯುತರು ರಾಜೀವ್ ಗಾಂಧಿ ಎಕ್ಸಲೆನ್ಸಿ ಪ್ರಶಸ್ತಿಗೆ ಭಾಜನರಾದಂತಹ ಒಬ್ಬ ಹಿರಿಯ ಶ್ರೇಷ್ಠ ರಾಜಕಾರಿಣಿಯಾಗಿದ್ದರು. ಶ್ರೀಯುತರ ನಿಧನದಿಂದಾಗಿ ಸಾರ್ವಜನಿಕ ಕ್ಷೇತ್ರ ಬರಡಾಗಿದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು ಉಲ್ಲೇಖ ಮಾಡಿರುವಂತಹ "ಶ್ರೀಮತಿ ರೇಣುಕಾ ರಾಜೇಂದ್ರನ್" ರವರು ಮೂರು ಬಾರಿ ಕೆಳಮನೆಯ ಶಾಸಕರಾಗಿದ್ದರು. ದಿವಂಗತ ಹರ್ಷರಂಜಿತ ಮುಖ್ಯ ಮಂತ್ರಿಗಳಾದಂತಹ ಶ್ರೀ ಆರ್.ಗುಂಡೂರಾವ್‌ರವರ ಸಚಿವ ಸಂಪುಟದಲ್ಲಿ ರೇಷ್ಮೆ ಹಾಗೂ ಕ್ರೀಡಾ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ಒಂದು ಸಣ್ಣ ಘಟನೆಯಿಂದಾಗಿ ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಡುವಂತಹ ಪ್ರಸಂಗ ಬಂದಿದ್ದು ಬಹಳ ನೋವಿನ ಸಂಗತಿಯಾಗಿದೆ. ನಾವೆಲ್ಲರೂ ಸಾರ್ವಜನಿಕ ಬದುಕು ಬಹಳ ಸ್ವಚ್ಛವಾಗಿರಬೇಕು ಎನ್ನುವಂತಹ ಮಾತಿಗೆ ಬದ್ಧರಾಗಿದ್ದೇವೆ. ಆದರೆ, ಶ್ರೀಯುತರು ಅತ್ಯುತ್ತಮ ಮಹಿಳಾ ರಾಜಕಾರಣಿ ಎನ್ನುವುದನ್ನು ನಾವೆಲ್ಲರೂ ಮರೆಯುವುದಕ್ಕೆ ಆಗುವುದಿಲ್ಲ. ಶ್ರೀಯುತರ ಅಗಲಿಕೆ ಸಾರ್ವಜನಿಕ ಬದುಕಿನಲ್ಲಿರುವಂತಹ ಮಹಿಳಾ ರಾಜಕಾರಣಿಗಳಿಗೂ ಸಹ ನೋವಿನ ಸಂಗತಿಯಾಗಿದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, "ಡಾ॥ ಬನ್ನಂಜೆ ಗೋವಿಂದಾಚಾರ್ಯ" ರವರ ಬಗ್ಗೆ ಉಲ್ಲೇಖಿಸಿ ಸಂತಾಪವನ್ನು ಮಂಡಿಸಿದ್ದೀರಿ. ಶ್ರೀಯುತರು "ಆಧ್ಯಾತ್ಮಿಕ ಲೋಕದ ಆಲದ ಮರವಿದ್ದಂತೆ" ಎಂದು ತಾವು ಹೇಳಿದ್ದೀರಿ. ಶ್ರೀಯುತರು "ಆಧ್ಯಾತ್ಮಿಕ ಲೋಕದ ಧ್ರುವತಾರೆ" ಇದ್ದಂತೆ. ಆಧ್ಯಾತ್ಮಿಕ ಲೋಕದಲ್ಲಿ ಅಗಾಧವಾದಂತಹ ಸಾಧನೆ ಮಾಡಿದವರು. ಶ್ರೀಯುತರು ಸಂಸ್ಕೃತದ ಪ್ರಖಾಂಡ ಪಂಡಿತ, ಅಪ್ರತಿಮ ಮೇಧಾವಿ ಹಾಗೂ ಪ್ರಶ್ನಾತೀತ ಖ್ಯಾತ ಪ್ರವಚನಕಾರರಾಗಿದ್ದರು. ಅಲ್ಲದೇ, ಭಾಷಾಂತರಕಾರರಾಗಿ, ಕವಿಯಾಗಿ ದಾಸ ಸಾಹಿತ್ಯದಲ್ಲಿಯೂ ಸಹ ಬಹಳ ಕೆಲಸವನ್ನು ಮಾಡಿದ್ದಾರೆ. ಶ್ರೀಯುತರು ಚಲನಚಿತ್ರ ಕ್ಷೇತ್ರಕ್ಕೂ ಬಹಳಷ್ಟು ಕೊಡುಗೆಯನ್ನು ನೀಡಿದ್ದಾರೆ. ಶ್ರೀಯುತರ ನಿಧನದಿಂದಾಗಿ ಆಧ್ಯಾತ್ಮಿಕ ಲೋಕಕ್ಕೆ ಒಂದು ದೊಡ್ಡ ಹಾನಿಯಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಸಮಾಜಕ್ಕೆ ಜ್ಞಾನದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಧೆಯುಣಿಸಿದ ಶ್ರೀಯುತರು ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, ಪಂಡಿತ ರತ್ನ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು. ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಒಬ್ಬ ಶ್ರೇಷ್ಠ ಆಧ್ಯಾತ್ಮಿಕ ಪ್ರವಚನಕಾರರು, ಸಾರಸ್ವತ ಲೋಕದ ಹಿರಿಯ ವಿದ್ವಾಂಸರೊಬ್ಬರನ್ನು ಕಳೆದುಕೊಂಡಂತಾಗಿದೆ.

ಮಾನ್ಯ ಸಭಾಪತಿಯವರೇ, ತಾವು "ಪ್ರೊಫೆಸರ್ ರೊದ್ದಂ ನರಸಿಂಹ" ರವರ ಪ್ರಸ್ತಾಪವನ್ನು ಮಂಡಿಸಿದ್ದೀರಿ. ಭಾರತೀಯ ವೈಮಾನಿಕ ವಿಜ್ಞಾನಿ ಮತ್ತು ದ್ರವಚಲನ ಶಾಸ್ತ್ರಜ್ಞರಾದ ರೊದ್ದಂ ನರಸಿಂಹ ರವರ ಹೆಸರು ನೆನಪಾಗುತ್ತಿದ್ದಂತೆ, ನನಗೆ "ಭಾರತ ರತ್ನ ಶ್ರೀ ಸರ್.ಎಂ.ವಿಶ್ವೇಶ್ವರಯ್ಯ" ರವರು ನೆನಪಾಗುತ್ತಾರೆ. ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಜಿನಿಯರಿಂಗ್ ಪದವಿಯನ್ನು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಮಾಸ್ಟರ್ ಆಫ್ ಇಂಜಿನಿಯರಿಂಗ್ ಪದವಿಯನ್ನು ಹಾಗೂ ಅಮೆರಿಕಾದ ಕ್ಯಾಲಿಫೋರ್ನಿಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿರುತ್ತಾರೆ. ಅಲ್ಲದೇ, ಪ್ರತಿಷ್ಠಿತ ಸಂಸ್ಥೆಗಳಾದ Indian Institute of Science ನಲ್ಲಿ ಏರೋಸ್ಪೇಸ್ ಇಂಜಿನಿಯರಿಂಗ್‌ನ ಪ್ರಾಧ್ಯಾಪಕರಾಗಿ, ಪಂಡಿತ್ ಜವಹರಲಾಲ್ ನೆಹರು ಕೇಂದ್ರದ ಇಂಜಿನಿಯರಿಂಗ್ ಮೆಕ್ಯಾನಿಕ್ಸ್ ಘಟಕದ ಅಧ್ಯಕ್ಷರಾಗಿ, National Institute of Advanced Studies ನ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಶ್ರೀಯುತರು ಈ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕೆಲಸ ಮಾಡುವುದರ ಜೊತೆಗೆ ಒಳ್ಳೆಯ ಹೆಸರನ್ನು ಪಡೆದುಕೊಂಡು ಬಂದಂತಹ ಧೀಮಂತ ವ್ಯಕಿಯಾಗಿದ್ದರು.

(ಮುಂದು.,)

(6)28–01–2021(1–30)ಎಂವಿ–ಬಿಎನ್‌ಎಸ್

**ಶ್ರೀ ಎಸ್.ಆರ್.ಪಾಟೀಲ್ (ಮುಂದು...):–**

ಅವರು ಒಬ್ಬ ಶ್ರೇಷ್ಠ ವಿಜ್ಞಾನಿ ಅಷ್ಟೇ ಅಲ್ಲ ತಂತ್ರಜ್ಞಾನಿ ಕೂಡ ಆಗಿದ್ದರು.  ಈ ಹಿಂದೆ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಾನು ಇವರ ಬಗ್ಗೆ ಬಹಳಷ್ಟು ಗೌರವ ಭಾವನೆ ಇಟ್ಟುಕೊಂಡಿದ್ದೇನೆ. ಇವರು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧವಾದ ಸಾಧನೆ ಮಾಡಿದಂತಹವರು.  ಈಗ ವಿಜ್ಞಾನ ಮತ್ತು ತಂತ್ರಜ್ಞಾನದ ಇನ್ನೊಂದು ಹೆಸರು ಎಂದರೆ ಅದು ಪ್ರೊಫೆಸರ್ ರೊದ್ದಂ ನರಸಿಂಹ ಎನ್ನುವಷ್ಟರ ಮಟ್ಟಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಎತ್ತರಕ್ಕೆ ಬೆಳೆದವರು. ಇವರಿಗೆ ಪದ್ಮವಿಭೂಷಣ ಪ್ರಶಸ್ತಿ ಮತ್ತು ಪದ್ಮಭೂಷಣ ಪ್ರಶಸ್ತಿ ಬಂದಿದೆ ಮತ್ತು ಅವರು ಪಡೆದಿರುವ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. ಅವರು ಅಂತರರಾಷ್ಟ್ರೀಯ ಮಟ್ಟದ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವುದು ಅಷ್ಟೇ ಅಲ್ಲ. ಇವತ್ತು ನಮ್ಮ ಯುವಕರು ಮತ್ತು ಮಕ್ಕಳು ನಾವುಗಳು ವಿಜ್ಞಾನಿಗಳಾಗುತ್ತೇವೆಂದು ಹೇಳುವುದಿಲ್ಲ. ಅವರು ಇಂಜಿನಿಯರ್, ಡಾಕ್ಟರ್ ಆಗುತ್ತೇವೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಾಗುತ್ತೇವೆಂದು ಹೇಳುತ್ತಾರೆ. ಆದರೆ, ಇವತ್ತಿನ ವಿಜ್ಞಾನದಲ್ಲಿ ಅನೇಕ ಯುವ ವಿಜ್ಞಾನಿಗಳಿಗೆ ಮಾರ್ಗದರ್ಶಕರಾಗಿ, ವಿಜ್ಞಾನ ಕ್ಷೇತ್ರವನ್ನೇ ಬೆರಗುಗೊಳಿಸುವಂತೆ ಅದನ್ನು ಬಲವರ್ಧನೆ ಮಾಡಿದಂತಹವರು. ಇವರ ಅಗಲಿಕೆಯಿಂದ ನಮ್ಮ ನಾಡಿನ ವಿಜ್ಞಾನ ಮತ್ತು ತಂತ್ರಜ್ಞಾನ ಒಬ್ಬ ಶ್ರೇಷ್ಠ ವ್ಯಕ್ತಿಯನ್ನು ಕಳೆದುಕೊಂಡಂತಹ ಅನುಭವವಾಗಿದೆ.

ಇನ್ನು ರಾಮ ನಾಗಪ್ಪ ಶೆಟ್ಟಿ ಎಂದರೆ ಎಲ್ಲರಿಗೂ ಗೊತ್ತಿರುವವರು. ಇವರು ಆರ್.ಎನ್.ಶೆಟ್ಟಿ ಎಂದೇ ಪ್ರಸಿದ್ದರು. ಇವರು ಕೇವಲ ಮಾಧ್ಯಮಿಕ ಶಾಲೆಯಲ್ಲಿ ಓದಿದಂತಹವರು ಮತ್ತು ಗುತ್ತಿಗೆದಾರರಾಗಿ ತಮ್ಮ ಜೀವನವನ್ನು ಪ್ರಾರಂಭ ಮಾಡಿದವರು. ಇವರಿಂದ ಯಾರೂ ಸಹಾಯವನ್ನು ತೆಗೆದುಕೊಂಡಿಲ್ಲವೆಂದು ಹೇಳುವುದು ಮತ್ತು ಇವರು ಯಾವ ಕ್ಷೇತ್ರಗಳಲ್ಲೂ ಕೆಲಸ ಮಾಡಿಲ್ಲವೆಂದು ಹೇಳುವುದು ಕೂಡ ಬಹಳ ಕಷ್ಟ. ಅಂದರೆ, ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ವೈದ್ಯಕೀಯ, ವಸತಿ, ಔದ್ಯೋಗಿಕ, ವಾಣಿಜ್ಯ, ಶೈಕ್ಷಣಿಕ, ಮೂಲ ಸೌಕರ್ಯಗಳು, ವಿದ್ಯುತ್ ಮತ್ತು ನೀರಾವರಿ ಕ್ಷೇತ್ರ. ಈ ರೀತಿಯಾಗಿ ಇವರು ಎಲ್ಲಾ ಕ್ಷೇತ್ರಗಳಲ್ಲೂ ಕೈಯಾಡಿಸಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ, ಇವರು ಕೃಷಿ ಮಾಡದಂತಹ ಕ್ಷೇತ್ರವಿಲ್ಲ ಅನ್ನುವ ಮಟ್ಟಿಗೆ ಶ್ರೀ ಆರ್.ಎನ್.ಶೆಟ್ಟಿಯವರು ಬಹಳ ಸ್ನೇಹ ಮತ್ತು ಸೀದಾ-ಸಾದ ಜೀವಿಗಳು. ನಾನು ಎರಡು ಬಾರಿ ಹುಬ್ಬಳ್ಳಿಯಿಂದ ಪ್ರವಾಸ ಮಾಡುವಂತಹ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದಾಗ, ಅವರು ನಾಡಿನ ಬಗ್ಗೆ ಚಿಂತನೆ ಮಾಡುವುದನ್ನು ಕೇಳಿದ್ದೇನೆ. ಅವರು ಸುಮಾರು ಹತ್ತು ಸಾವಿರ ಜನರಿಗೆ ಉದ್ಯೋಗವನ್ನು ನೀಡಿದ್ದಾರೆ. ಬಹಳ ಜನ ಉದ್ಯೋಗವನ್ನು ತೆಗೆದುಕೊಳ್ಳುವುದಕ್ಕೆ ಹೋಗುತ್ತಾರೆ. ಅಂದರೆ ಅವರು ಉದ್ಯೋಗಿಯಾಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ, ಇವರು ಉದ್ಯೋಗದಾತರಾದರು. ಇವರು ಸುಮಾರು 24 ದೊಡ್ಡ ದೊಡ್ಡ ಸಂಸ್ಥೆಗಳನ್ನು ಸ್ಥಾಪನೆ ಮಾಡಿ, ಸುಮಾರು ಹತ್ತು ಸಾವಿರ ಜನರಿಗೆ ಖಾಯಂ ಉದ್ಯೋಗ ನೀಡಿದ್ದಾರೆ. ಅವರು ಮುರುಡೇಶ್ವರ ಕ್ಷೇತ್ರವನ್ನು ಬಹಳಷ್ಟು ಅಭಿವೃದ್ಧಿಪಡಿಸಿದ್ದಾರೆ. ನೀರಾವರಿಗೆ ಸಂಬಂಧಪಟ್ಟಂತೆ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅತ್ಯಂತ ದೊಡ್ಡ ನೀರಾವರಿ ಯೋಜನೆಗಳಾದಂತಹ, ಬೆಳಗಾವಿ ಜಿಲ್ಲೆಯ ಹಿಡಕಲ್, ತಟ್ಟಿಹಳ್ಳ, ಗೇರುಸೊಪ್ಪ ಜಲಾಶಯ ಮತ್ತು ರಾಜನ್ ಕೊಲ್ಲೂರು, ಗುಂಡಲ್ಕೇರಾ ಇಲ್ಲೆಲ್ಲಾ ಮುಖ್ಯ ಟನಲ್

ಮತ್ತು ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ಅವರು ದೊಡ್ಡ ದೊಡ್ಡ ಸೇತುವೆಗಳನ್ನು ನಿರ್ಮಾಣ ಮಾಡುವುದರ ಜೊತೆಗೆ, ಕೊಂಕಣ ರೈಲು ಮಾರ್ಗಕ್ಕೆ 18 ಟನಲ್‌ಗಳನ್ನು ನಿರ್ಮಿಸಿ ಕೊಟ್ಟಿರುತ್ತಾರೆ. ಇದು ಅತ್ಯಂತ ಮಹತ್ವಾಕಾಂಕ್ಷಿ ಯೋಜನೆ. ನಮ್ಮ ನಾಡಿನ ಪ್ರತಿಷ್ಠಿತ ನೀರಾವರಿ ಯೋಜನೆಯಾದಂತಹ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ, ಕೃಷ್ಣಾ ನಾರಾಯಣಪುರ ಡ್ಯಾಮ್‌ಗೆ ಮುಖ್ಯ ಕೆನಾಲ್ ನಿರ್ಮಾಣ ಮಾಡಿರುತ್ತಾರೆ. ನಾರಾಯಣಪುರ ಡ್ಯಾಮ್‌ಗೆ ಎಡದಂಡೆ ಮತ್ತು ಬಲದಂಡೆ ನಾಲೆಗಳನ್ನು ನಿರ್ಮಾಣ ಮಾಡಿರುತ್ತಾರೆ. ಇದು ಬಹಳ ಮಹತ್ವದ ಯೋಜನೆ. ಮತ್ತೆ ಆರ್.ಎನ್.ಎಸ್. ಮೋಟಾರ್ಸ್ ಎಂಬುದು ನಮಗೆಲ್ಲರಿಗೂ ಪರಿಚಿತವಿದೆ. ಒಟ್ಟಾರೆಯಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ, ಅವರು ಒಬ್ಬ ಪರೋಪಕಾರಿ ಮನುಷ್ಯ. ಯಾವುದಾದರೂ ಕ್ಷೇತ್ರಕ್ಕೆ ತಮ್ಮ ಕೊಡುಗೆ ಕೊಡಬೇಕು ಮತ್ತು ಆ ಕ್ಷೇತ್ರವನ್ನು ಅಭಿವೃದ್ಧಿ ಮಾಡಬೇಕು ಎಂದು ಯಾವಾಗಲೂ ಚಿಂತನೆ ಮಾಡಿದಂತಹವರು. ಇವರು ಒಬ್ಬ ಸಮಾಜಮುಖಿ ಮತ್ತು ಮನುಷ್ಯಮುಖಿ ವ್ಯಕ್ತಿಯಾಗಿದ್ದರು. ಇವರು ಶ್ರೇಷ್ಠ ದಾನಿಗಳು ಕೂಡ ಆಗಿದ್ದರು. ಆ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ತಮ್ಮದೇ ಆದಂತಹ ತಮ್ಮ ಜೀವಮಾನದ ಕೊನೆ ಉಸಿರು ಇರುವವರೆಗೆ ದುಡಿಮೆ ಮಾಡಿದಂತಹ ಆರ್.ಎನ್.ಶೆಟ್ಟಿಯವರ ನಿಧನ ನಮಗೆ ನಿಜವಾಗಿಯೂ ಸಮಾಜಮುಖಿ ವ್ಯಕ್ತಿಯನ್ನು ಕಳೆದುಕೊಂಡಂತಹ ಅನುಭವವಾಗಿದೆ.

ಮಹಾದೇವಿ ಅಣ್ಣಾರಾವ ವಣದೆ, ಇವರು ಕೃಷಿಯಲ್ಲಿ ಸಾಧನೆ ಮಾಡಿದಂತಹ ಒಬ್ಬ ಮಹಿಳೆ. ಇವತ್ತು ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರಾಗಿದ್ದಾರೆ. ಇವತ್ತು ನೂರು ಮತ್ತು ಐವತ್ತು ಎಕರೆ ಜಮೀನು ಇದ್ದರು ನಾವು ಏನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ಬಹಳಷ್ಟು ಕೃಷಿಕರಿಂದ ಕೇಳಿದ್ದೇನೆ ಮತ್ತು ಕೇವಲ ಹತ್ತು ಎಕರೆ ಜಮೀನು ಇದೆ ಅದರಿಂದ ನಮ್ಮ ಬದುಕು ಸಾಗಿಸುವುದಕ್ಕೆ ಕಷ್ಟವಿದೆ ಎನ್ನುತ್ತಾರೆ. ಆದರೆ, ಇವರು ಮೂರು ಎಕರೆ ಜಮೀನಿನಲ್ಲಿ ಪುಷ್ಪ ಕೃಷಿಯನ್ನು ಮಾಡಿದ್ದಾರೆ. ಇದರಿಂದ ಅವರು ಇಡೀ ಕೃಷಿಕರ ಗಮನವನ್ನು ಸೆಳೆದಂತಹವರು. ಅಷ್ಟು ಕಡಿಮೆ ಜಮೀನಿನಲ್ಲಿ ಬಹು ದೊಡ್ಡ ಸಾಧನೆ ಮಾಡಿ, ಅತಿ ಹೆಚ್ಚಿನ ಅದಾಯ ಬರುವಂತೆ ಕೃಷಿ ಮಾಡಿದ್ದಾರೆ. ಉಳಿದೆಲ್ಲಾ ಮಹಿಳಾ ಕೃಷಿಕರಿಗೆ ದಾರಿ ದೀಪವಾಗುವಂತಹ ಕೆಲಸ ಮಾಡಿರುವುದು ಅಷ್ಟೇ ಅಲ್ಲ. ಇವರು ರಾಜ್ಯೋತ್ಸವ ಪ್ರಶಸ್ತಿಗೆ ಕೂಡ ಭಾಜನರಾದಂತಹವರು. ನಮ್ಮ ನಾಡಿನಲ್ಲಿ ಬಹಳಷ್ಟು ಸಣ್ಣ ಮತ್ತು ಅತೀ ಸಣ್ಣ ರೈತರಿದ್ದಾರೆ. ಅಂತಹವರಿಗೆ ಇವರು ದಾರಿದೀಪ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾಮಿ ಹರ್ಷಾನಂದ ಮಹಾರಾಜ್, ಇವರು ರಾಮಕೃಷ್ಣ ಮಠದ ಅಧ್ಯಕ್ಷರು. ಇವರು ಮಧ್ಯಪ್ರದೇಶದ ಭಾನುಪುರದಲ್ಲಿ ಜನಿಸಿದ್ದ ಶ್ರೀಯುತರು ಚಿನ್ನದ ಪದಕದೊಂದಿಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪೂರೈಸಿದ್ದರು. 1954ರಲ್ಲಿ ಬಸವನಗುಡಿಯ ರಾಮಕೃಷ್ಣ ಮಠದಲ್ಲಿ ಆಧ್ಯಾತ್ಮ ಜೀವನವನ್ನು ಪ್ರಾರಂಭಿಸಿದರು.

ಇವರು ಸುಮಾರು 31 ವರ್ಷಗಳ ಕಾಲ ಬೆಂಗಳೂರು ಶಾಖೆಯ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ನನಗೂ ಕೂಡ ಸ್ವಾಮಿ ಹರ್ಷಾನಂದ ಮಹಾರಾಜ್‌ರ ಸಂಪರ್ಕವಿತ್ತು. ಇವರು ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ವಿಚಾರವನ್ನಾಗಲಿ, ಅವರ ಗುರುಗಳಾದಂತಹ ಶ್ರೀ ರಾಮಕೃಷ್ಣ ಪರಮಹಂಸರ ವಿಚಾರಧಾರೆಯನ್ನಾಗಲಿ ಮತ್ತು ಮಾತೆ ಶಾರದಾದೇವಿಯವರ ಪ್ರಖರವಾದ ವಿಚಾರಗಳನ್ನು ಸಮಾಜಕ್ಕೆ ಮುಟ್ಟಿಸುವಂತಹ ಕೆಲಸವನ್ನು ಮಾಡಿದ್ದಾರೆ. ಪ್ರಜ್ಞಾಪೂರಕವಾದಂತಹ ಶ್ರೇಷ್ಠ ವಿಚಾರಗಳಿದ್ದವು. ಅವರು ಸಂಸ್ಕೃತ, ಕನ್ನಡ, ತೆಲುಗು, ಹಿಂದಿ, ಬಂಗಾಳಿ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣಿತಿಯನ್ನು ಹೊಂದಿದ್ದರು. ಇವರು ಒಬ್ಬ ಶ್ರೇಷ್ಠ ವಾಗ್ಮಿಗಳು. ಇವರು ಅತ್ಯುತ್ತಮ ಭಾಷಣಕಾರರಾಗಿದ್ದರು. ಅವರು ಸ್ವಾಮಿ ವಿವೇಕಾನಂದರ, ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ಮಾತೆ ಶಾರದಾದೇವಿಯವರ ವಿಚಾರಗಳನ್ನು ಸಮಾಜಕ್ಕೆ ಮುಟ್ಟಿಸಿ, ಸಮಾಜವನ್ನು ಮುನ್ನಡೆಸುವುದಕ್ಕೆ ಸಹಕಾರಿಯಾದಂತಹ ಒಬ್ಬ ಧಾರ್ಮಿಕ ಸಂತನನ್ನು ಕಳೆದುಕೊಂಡಂತಹ ಮನೋಭಾವವಾಗಿದೆ.

ಗುಲಾಮ್ ಮಸ್ತಫಾ ಖಾನ್, ಇವರು ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಪ್ರಶಸ್ತಿಗಳಿಗೆ ಪುರಸ್ಕೃತರಾಗಿದ್ದರು. ಇವರ ತಂದೆಯೇ ಇವರಿಗೆ ಗುರುಗಳಾಗಿದ್ದರು. ಅವರ ತಂದೆಯವರಿಂದ ಸಂಗೀತ ಶಿಕ್ಷಣವನ್ನು ಪಡೆದು, ತಮ್ಮ ಎಂಟನೇ ವಯಸ್ಸಿನಲ್ಲಿಯೇ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲರ ಗಮನವನ್ನು ಸೆಳೆದಂತಹವರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ಪಡೆದ ಎಪ್ಪತ್ತಕ್ಕೂ ಹೆಚ್ಚು ಸಾಕ್ಷ್ಯಚಿತ್ರಗಳಿಗೆ ಶ್ರೀಯುತರು ತಮ್ಮ ಕಂಠದಾನ ಮಾಡಿದ್ದಾರೆ. 1950ರ ದಶಕದಲ್ಲಿ ಖ್ಯಾತ ಗಾಯಕರುಗಳಾದ ಶ್ರೀಮತಿ ಆಶಾಬೋಸ್ಲೆ, ಶ್ರೀ ಮನ್ನಾಡೇ, ಶ್ರೀ ವಹಿದಾ ರೆಹಮಾನ್, ಶ್ರೀ ಸೋನು ನಿಗಮ್ ಹಾಗೂ ಇನ್ನಿತರೆ ಗಾಯಕರುಗಳಿಗೆ ಗುರುಗಳಾಗಿದ್ದರು. ಇವರು ಸಂಗೀತ ಲೋಕಕ್ಕೆ ಅಪಾರವಾದಂತಹ ಸೇವೆ ಸಲ್ಲಿಸಿದಂತಹವರು. ಇವರು ಪದ್ಮಶ್ರೀ ಮತ್ತು ಅನೇಕ ಪ್ರಶಸ್ತಿಗಳಿಗೆ ಭಾಜನರಾದಂತಹವರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಲ್ಲಪ್ಪ ಚನ್ನವೀರಪ್ಪ ಮನಗೂಳಿ ನಿನ್ನೆ ರಾತ್ರಿ ನಿಧನರಾಗಿದ್ದಾರೆ. ಇವರು ನಮ್ಮ ಜಿಲ್ಲೆಯವರು. ನಾನು ಪ್ರತಿನಿಧಿಸುವಂತಹ ಸ್ಥಳೀಯ ಸಂಸ್ಥೆ ಕ್ಷೇತ್ರವಾದ ವಿಜಯಪುರ ಜಿಲ್ಲೆಯ ಹಾಲಿ ವಿಧಾನಸಭೆಯ ಸದಸ್ಯರು. ಅವರು ಎರಡು ಬಾರಿ ಸಚಿವರಾಗಿದ್ದಂತಹವರು. ನಮ್ಮ ದೋಸ್ತಿ ಸರ್ಕಾರವಾದ ಜೆಡಿ(ಎಸ್)–ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ತೋಟಗಾರಿಕೆ ಸಚಿವರಾಗಿದ್ದರು. ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ರಾಜ್ಯ ಸಚಿವರಾಗಿ ಕೂಡ ಕೆಲಸ ಮಾಡಿದ್ದರು. ಅವರು ಏಳು ಬಾರಿ ಚುನಾವಣೆಗೆ ಸ್ಪರ್ಧಿಸಿ, ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಅತ್ಯಂತ ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದರು ಮತ್ತು ನೀರಾವರಿ ಬಗ್ಗೆ ಬಹಳಷ್ಟು ಕನಸು ಕಾಣುವಂತಹ ಕನಸುಗಾರರು. ಇಡೀ ರಾಜ್ಯದಲ್ಲಿ ಉತ್ತರ ಕರ್ನಾಟಕ ಹಿಂದುಳಿದಿದೆ ಎಂದು ಎಲ್ಲರೂ ಸಹ ಪ್ರಸ್ತಾಪ ಮಾಡುತ್ತಾರೆ. ಉತ್ತರ ಕರ್ನಾಟಕದಲ್ಲಿ ವಿಜಯಪುರ ಜಿಲ್ಲೆ ಹಿಂದುಳಿದಿದೆ. ಆ ವಿಜಯಪುರ ಜಿಲ್ಲೆಯಲ್ಲಿ ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳು ಈ ಎರಡು ತಾಲ್ಲೂಕುಗಳು ಅಭಿವೃದ್ಧಿಯಿಂದ ಬಹಳಷ್ಟು ದೂರ ಇರುವಂತಹವು. ಆ ಎರಡು ಕ್ಷೇತ್ರಗಳಲ್ಲಿ ಇವರು ಸಿಂಧಗಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಈ ರಾಜ್ಯದ ಹಿಂದಿನ ಮಾನ್ಯ ಮಾಜಿ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಮತ್ತು ವಿಶೇಷವಾಗಿ ಈ ದೇಶದ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾಗಿದ್ದಂತಹ ಶ್ರೀ ಹೆಚ್.ಡಿ.ದೇವೇಗೌಡರ ಜೊತೆ ಬಹಳ ನಿಕಟವಾದಂತಹ ಸಂಬಂಧವನ್ನು ಹೊಂದಿದ್ದರು.

**(ಮುಂದು...)**

(07) 28.01.2021 01-40 LL-KS(BNS)

**ಶ್ರೀ ಎಸ್.ಆರ್. ಪಾಟೀಲ್**(ಮುಂದುವರೆದಿದ್ದು...)

ಕಾರಣ, ಏನೆಂದರೆ, ಒಟ್ಟಾರೆಯಾಗಿ ನೀರಾವರಿ ಮುಖಾಂತರ ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡುತ್ತೇನೆಂದು ಬಹಳ ಕನಸು ಕಂಡಿದ್ದರು. 'ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ'ಯು ಪ್ರತಿಷ್ಠಿತ ನೀರಾವರಿ ಯೋಜನೆಯಾಗಿರುತ್ತದೆ. ಇದು ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವಂತಹ ಏತ ನೀರಾವರಿ ಯೋಜನೆಗಳಿಗೆ ಸರಿಸಮಾನವಾಗಿದ್ದು, ಅದರ ಬೆನ್ನತ್ತಿ ಆ ಯೋಜನೆಯನ್ನು ಫಲಪ್ರದ ಮಾಡುವುದಕ್ಕೆ ಅವರು ತಮ್ಮದೇ ಆದಂತಹ ಕೊಡುಗೆ ಸಲ್ಲಿಸಿರುತ್ತಾರೆ. ಇದಕ್ಕಾಗಿ ಅವರು ಬಹಳ ಶ್ರಮಪಟ್ಟಿದ್ದಾರೆ. ಈ ಬಗ್ಗೆ ಅವರು ಕನಸು ಕಂಡಿದ್ದರು. ನನಗೆ ಅವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವಾಗ ಸಿಕ್ಕಿದರೂ ಸಹ ಕೃಷ್ಣ ಮೇಲ್ದಂಡೆ ಯೋಜನೆ 3ನೇ ಹಂತದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರಲ್ಲದೆ, ಅದನ್ನು ಬೇಗನೇ ಮುಗಿಸಬೇಕೆಂದು ಹೇಳುತ್ತಿದ್ದರು. ಈ ಯೋಜನೆಯಲ್ಲಿ ಒಟ್ಟು 130 ಟಿ.ಎಂ.ಸಿ. ನೀರು ಅಲೋಕೇಷನ್ ಇದ್ದು, ಅದರಲ್ಲಿ ಬಿಜಾಪುರ ಜಿಲ್ಲೆಗೆ nearly 80 ಟಿ.ಎಂ.ಸಿ. ನೀರು allocation ಇರುತ್ತದೆ. ಅದನ್ನು ಬಳಕೆ ಮಾಡಬೇಕೆಂದು ಅವರು ಕನಸು ಕಾಣುತ್ತಿದ್ದರು. ಆದರೂ ಕೂಡ, ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆ ಕುಂಟುತ್ತಾ ಸಾಗುತ್ತಿದೆ. ಈ ದುಃಖದಿಂದಲೇ ಶ್ರೀಯುತರು ನಮ್ಮನ್ನು ಅಗಲಿ ಹೋಗಿದ್ದಾರೆಂದು ನನ್ನ ಭಾವನೆಯಾಗಿದೆ.

ಶ್ರೀ ಸಿ.ಎಂ. ಮನಗೂಳಿ ಎನ್ನುವಂತಹ ನಾಯಕರು ನಮ್ಮ ಮಧ್ಯದಲ್ಲಿ ಇನ್ನೂ ಇರಬೇಕಾಗಿತ್ತು. ಏಕೆಂದರೆ, ಅವರು ವಿಶೇಷವಾಗಿ ಕೃಷಿ ಬಗ್ಗೆ, ನೀರಾವರಿ ಬಗ್ಗೆ ಮತ್ತು ಆ ಭಾಗದ ಅಭಿವೃದ್ಧಿ ಬಗ್ಗೆ regional imbalance ಸರಿ ಮಾಡುವಂತಹ ವಿಚಾರದಲ್ಲಿ ಬಹಳಷ್ಟು ಕೊಡುಗೆ ನೀಡಿದಂತಹ ಒಬ್ಬ ಹಿರಿಯ ರಾಜಕಾರಣಿಯಾಗಿದ್ದರು. ಅವರ ಅಗಲಿಕೆ ನಿಜವಾಗಿಯೂ ನಮಗೆ ಬಹಳಷ್ಟು ದುಃಖವನ್ನು ಉಂಟುಮಾಡಿದೆ. ಅಷ್ಟೇ ಅಲ್ಲದೇ, ಅವರ ಸಾವು ನಮ್ಮ ಜಿಲ್ಲೆಗೆ ಮಾತ್ರವಲ್ಲದೇ, ಇಡೀ ಸಾರ್ವಜನಿಕ ಬದುಕಿನಲ್ಲಿ ಅಭಿವೃದ್ಧಿ ಪರ ಚಿಂತನೆ ಮಾಡುವಂತಹ ಮತ್ತು ಸಾರ್ವಜನಿಕ ಕ್ಷೇತ್ರವೇ ಇವೊತ್ತಿನ ದಿವಸ ಬರಡಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಯವರಾದ ತಾವು ಇವೊತ್ತಿನ ದಿವಸ ತಂದಂತಹ 10 ದಿವ್ಯ ಚೇತನರ ಹುಟ್ಟು-ಸಾವಿನ ಮಧ್ಯೆ ಅಗಾಧವಾದಂತಹ ಸಾಧನೆ ಮಾಡಿದಂತವರು, ನಾಡು-ನುಡಿ, ಸಮಾಜಕ್ಕೆ ಅಥವಾ ತಾವು ಆಯ್ದುಕೊಂಡಂತಹ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದವರು ಇವೊತ್ತಿನ ದಿವಸ ಭೌತಿಕವಾಗಿ ನಮ್ಮ ಮಧ್ಯೆ ಇರುವುದಿಲ್ಲ. ಆದರೆ, ಅವರುಗಳು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಅವರುಗಳೆಲ್ಲರೂ ತಮ್ಮ ಜೀವನದಲ್ಲಿ ಅನೇಕ ಕನಸುಗಳನ್ನು ಕಂಡಿದ್ದರು. ಅದರಲ್ಲಿ ಅನೇಕರ ಕನಸುಗಳು ಅಪೂರ್ಣವಾಗಿರಬಹುದು. ಆ ಅಪೂರ್ಣವಾದ ಕನಸುಗಳನ್ನು ಪೂರ್ಣಗೊಳಿಸುವ ದಿಸೆಯಲ್ಲಿ ಇಂದಿನ ಜನಾಂಗ ಕಾರ್ಯೋನ್ಮುಖರಾಗಬೇಕೆಂಬ ಮಾತನ್ನು ವ್ಯಕ್ತಮಾಡಿ ನಮ್ಮನ್ನು ಅಗಲಿದಂತಹ ಎಲ್ಲಾ ದಿವ್ಯ ಚೇತನರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅಷ್ಟೇ ಅಲ್ಲದೇ, ಅವರುಗಳ ಅಗಲಿಕೆಯಿಂದ ಉಂಟಾದ ನೋವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ, ಈ ನಾಡಿನ ಜನತೆಗೆ, ಅವರ ಅಭಿಮಾನಿಗಳಿಗೆ ಹಾಗೂ ಸ್ನೇಹಿತರಿಗೆ ಆ ಭಗವಂತನು ಕರುಣಿಸಲೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಾಡಿನ 10 ಜನ ಶ್ರೇಷ್ಠ ವ್ಯಕ್ತಿಗಳನ್ನು ರಾಜ್ಯ ಮತ್ತು ರಾಷ್ಟ್ರ ಕಳೆದುಕೊಂಡಿದೆ. ಅದರಲ್ಲಿ ನಮ್ಮ ಸದನದ ಸದಸ್ಯರು ಹಾಗೂ ಉಪಸಭಾಪತಿಯವರಾಗಿದ್ದಂತಹ ಶ್ರೀ ಎಸ್.ಎಲ್. ಧರ್ಮೇಗೌಡರವರನ್ನು ನಾವು ಕಳೆದುಕೊಂಡಿದ್ದೇವೆ. ನಾವು ಸಹಜವಾಗಿ ಮಾತನಾಡುವುದೇನೆಂದರೆ, 'ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ' ಎನ್ನುವುದನ್ನು ನಾವು ಎಲ್ಲಾ ಕಡೆಯಿಂದಲೂ ತಿಳಿದುಕೊಂಡಿದ್ದೇವೆ. ಆ ಹುಟ್ಟು–ಸಾವಿನ ಮಧ್ಯೆ ಅವರುಗಳು ಏನು ಮಾಡಿದರು ಎನ್ನುವುದು ಇತಿಹಾಸದಲ್ಲಿ ಉಳಿಯುತ್ತದೆ ಎನ್ನುವುದಕ್ಕೆ ಶ್ರೀ ಎಸ್.ಎಲ್. ಧರ್ಮೇಗೌಡರು ಸಾಕ್ಷಿ ಎಂದು ನಾನು ಹೇಳುತ್ತೇನೆ. ಅವರು ಸರಳರು ಹೌದು, ಸಜ್ಜನರೂ ಹೌದು; ಇವೊತ್ತಿನ ಕಾಲಕ್ಕೆ ಶ್ರೀಯುತರು ಸರಳ ಸಜ್ಜನ ರಾಜಕಾರಣಿ ಎಂದು ನಾನು ಹೇಳುತ್ತೇನೆ. ಏಕೆಂದರೆ, ಅವರು ಸರಳರೂ ಆಗಿದ್ದರು ಮತ್ತು ಸಜ್ಜನರೂ ಕೂಡ ಆಗಿದ್ದರು. ಶ್ರೀಯುತರು ಇವೊತ್ತಿನ ದಿನಮಾನಗಳಲ್ಲಿ ನೂರಕ್ಕೆ ನೂರರಷ್ಟು ಮೌಲ್ಯಾಧಾರಿತ ರಾಜಕಾರಣವನ್ನು ಮಾಡಿದಂತಹವರು. ಅವರ ತಂದೆಯವರು ಶಾಸಕರಾಗಿದ್ದಾಗ, ನಾನು ಕೂಡ ಶಾಸಕನಾಗಿ ಒಂದು ಸಮಿತಿಯಲ್ಲಿ ಇಬ್ಬರು ಸದಸ್ಯನಾಗಿದ್ದೆವು. ಆ ಸಂದರ್ಭದಲ್ಲಿ ಶ್ರೀಯುತರು ಅಲ್ಲಿಗೆ ಆಗಾಗ್ಗೆ ಬರುತ್ತಿದ್ದರು. ಅಲ್ಲಿಂದ ಇಲ್ಲಿಯವರೆಗೆ ಶ್ರೀ ಎಸ್.ಎಲ್. ಧರ್ಮೇಗೌಡರು ಜನಪರವಾದಂತಹ ಕಾರ್ಯಕ್ರಮ ಮಾಡಿ ಜನರ ಹತ್ತಿರ ಇದ್ದರು ಎನ್ನುವುದಕ್ಕೆ ದಾಖಲೆಗಳೆಂದರೆ, 37 ವರ್ಷ TAPCMS ಸದಸ್ಯರಾಗಿದ್ದರು; 26 ವರ್ಷ ಹಾಲು ಒಕ್ಕೂಟದ ನಿರ್ದೇಶಕರಾಗಿದ್ದರು; 32 ವರ್ಷ ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನ ನಿರ್ದೇಶಕರಾಗಿದ್ದರು ಹಾಗೂ 30 ವರ್ಷ ಕರ್ನಾಟಕ ರಾಜ್ಯ ಸರ್ಕಾರ ಮಾರಾಟ ಮಹಾಮಂಡಳಿಯ ನಿರ್ದೇಶಕರಾಗಿದ್ದರು. ಅಲ್ಲದೇ, "ಸಹಕಾರಿ ಸೇವಾ ರತ್ನ" ಪ್ರಶಸ್ತಿಯನ್ನು ಪಡೆದಿದ್ದರು.

ಅಷ್ಟೇ ಅಲ್ಲದೇ, ಶ್ರೀಯುತರು ಒಬ್ಬ ಶ್ರೇಷ್ಠ ಕೃಷಿಕರು ಹಾಗೂ ಪರಿಸರವಾದಿಗಳು ಮತ್ತು ಪರಿಸರ ಪ್ರೇಮಿಗಳಾಗಿದ್ದರು. ನಾನು ಅವರ ತೋಟಕ್ಕೆ 3–4 ಬಾರಿ ಭೇಟಿ ನೀಡಿದ್ದೇನೆ. 2004ರಲ್ಲಿ ನಾನು ಮಂತ್ರಿಯಾಗಿದ್ದಾಗ, ಅವರು ಶಾಸಕರಾಗಿದ್ದರು. ಆ ಸಂದರ್ಭದಲ್ಲಿ ನಮ್ಮದೇ ಆದಂತಹ ಒಂದು ಗುಂಪು ಇತ್ತು. ಅವರು ಇಡೀ ರಾಜ್ಯಕ್ಕೆ ಪ್ರಸಿದ್ಧವಾದಂತಹ ಅಡಕೆ ಬೆಳೆಗಾರರಾಗಿದ್ದರು. ಒಮ್ಮೆ ನಾನು ಸದನ ನಡೆಯುವ ಮೊದಲು ಅಲ್ಲಿಗೆ ಭೇಟಿ ನೀಡಿದಾಗ, ನಾವು ಒಂದು ವರ್ಷಕ್ಕೆ ಸುಮಾರು 4 ಕೋಟಿ ರೂಪಾಯಿಯಷ್ಟು ಅಡಕೆ ಬೆಳೆ ಬೆಳೆಯುತ್ತೇವೆಂದು ಹೇಳಿದರು. ಅದರಲ್ಲಿ ಒಂದೆರೆಡು ಬಾರಿ ಒಳ್ಳೆಯ ದರ ಸಿಗಲಿಲ್ಲವೆಂದು ಇಟ್ಟಿದ್ದೆ ಎಂದು ಹೇಳಿದರು. ಅವರು ಒಬ್ಬ ಶ್ರೇಷ್ಠ ಕೃಷಿಕರಾಗಿದ್ದರು. ಅವರು ಜೀವನದ ಎಲ್ಲಾ ರಂಗಗಳಲ್ಲಿಯೂ ಅಪಾರವಾದಂತಹ ಪರಿಣಿತರಾಗಿದ್ದರು ಎನ್ನುವುದನ್ನು ಬೇರೆ

ಹೇಳಬೇಕಾಗಿಲ್ಲ. ಅಂತಹ ಒಬ್ಬ ಶ್ರೇಷ್ಠ ವ್ಯಕ್ತಿ ಇವೊತ್ತಿನ ದಿವಸ ನಮ್ಮೊಂದಿಗೆ ಇಲ್ಲ. ಅವರು ಇನ್ನೂ ತಮ್ಮ ಜೀವನದಲ್ಲಿ ಅನೇಕ ಸಾಧನೆಗಳನ್ನು ಮಾಡಬೇಕಾಗಿದ್ದಂತಹವರು. ಸಾವು ನಿಶ್ಚಿತ ಎಂದು ಹೇಳಿದರೂ ಸಹ, ಅವರಿಗೆ ಸಾಯುವಂತಹ ವಯಸ್ಸು ಆಗಿರಲಿಲ್ಲ. ಕೆಲವರು 100 ವರ್ಷಕ್ಕೆ ಸಾಯುತ್ತಾರೆ, ಇನ್ನೂ ಕೆಲವರು 50 ವರ್ಷಕ್ಕೆ ಸಾಯುತ್ತಾರೆ. ಅವರು ತಮ್ಮ ಜೀವನದಲ್ಲಿ ಇನ್ನೂ ಅನೇಕ ಸಾಧನೆಗಳನ್ನು ಮಾಡಬೇಕಾಗಿತ್ತು. ಆದರೆ, ಹಣೆಬರಹದಲ್ಲಿ ಬರೆದದ್ದನ್ನು ತಪ್ಪಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅವರ ಆಯಸ್ಸು ಅಷ್ಟೇ ಇತ್ತು ಎಂದು ಕಾಣಿಸುತ್ತದೆ. ಶ್ರೀಯುತರು ನಮ್ಮೆಲ್ಲರಿಗೂ ಮಾದರಿಯಾಗಿದ್ದರು. ನಾವುಗಳು ಯಾರು ಏನು ಹೇಳಿದರೂ ಸಹ ಶ್ರೀಯುತರು ಒಂದು ದಿವಸ ಸಿಟ್ಟು ಮಾಡಿಕೊಂಡಿದ್ದನ್ನು ನಾನು ನೋಡಿರುವುದಿಲ್ಲ. ಬಹುಶಃ ನನಗೆ ತಿಳಿದಮಟ್ಟಿಗೆ ಈ ಸದನದಲ್ಲಿ ಅಣ್ಣ-ತಮ್ಮಂದಿರು ಒಟ್ಟಿಗೆ ಈ ಸದನದ ಸದಸ್ಯರಾಗಿರುವುದು ಮೊದಲನೇ ಬಾರಿ ಎಂದು ನಾನು ಭಾವಿಸಿದ್ದೇನೆ. ಆ ಅಣ್ಣ-ತಮ್ಮಂದಿರಲ್ಲಿ ನೋಡಬೇಕಾದ ಗುಣ ಏನೆಂದರೆ, ನಾವು ಯಾವುದೋ ಕಾರಣಕ್ಕೆ ಶ್ರೀ ಎಸ್.ಎಲ್ ಧರ್ಮೇಗೌಡರಿಗೆ, "ಶ್ರೀ ಎಸ್.ಎಲ್. ಭೋಜೇಗೌಡರನ್ನು ಕರೆಯಿರಿ" ಎಂದು ಹೇಳಿದರೆ, ಅದಕ್ಕೆ ಅವರು "ಬೇಡ ಅಣ್ಣ" ಎಂದು ಹೇಳುತ್ತಿದ್ದರು. ಅಂದರೆ, ಅಷ್ಟರಮಟ್ಟಿಗೆ ಅಣ್ಣ-ತಮ್ಮಂದಿರಲ್ಲಿ ಪರಸ್ಪರ ಗೌರವ ಕೊಡುವುದು ಮತ್ತು ತೆಗೆದುಕೊಳ್ಳುವುದನ್ನು ನಾವು ಕಾಣುತ್ತಿದ್ದೆವು.

ಇದರ ಜೊತೆಗೆ, ಶ್ರೀಯುತರ ಕುಟುಂಬಗಳಲ್ಲಿ ಯಾವುದೇ ವ್ಯತ್ಯಾಸ ಕಾಣುತ್ತಿರಲಿಲ್ಲ. ಏಕೆಂದರೆ, ಎರಡೂ ಕುಟುಂಬಗಳು ಒಂದೇ ಕಡೆ ಸೇರಿ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಒಟ್ಟಾಗಿ ಭಾಗವಹಿಸುತ್ತಿದ್ದರು. ಒಂದು ವೇಳೆ ಕುಟುಂಬದ ಸದಸ್ಯರ ಆರೋಗ್ಯದಲ್ಲಿ ಹೆಚ್ಚು-ಕಡಿಮೆಯಾದರೆ ಅಥವಾ ಹೆಣ್ಣುಮಕ್ಕಳ ವಿಷಯದಲ್ಲಿ ಎರಡೂ ಕುಟುಂಬಗಳ ಸದಸ್ಯರು ಒಟ್ಟಿಗೆ ಸೇರುತ್ತಿದ್ದರು. ಒಂದು ಮಾದರಿ ಕುಟುಂಬವನ್ನು ನಾವು ನೋಡಬೇಕಾದರೆ ಶ್ರೀ ಎಸ್.ಎಲ್. ಧರ್ಮೇಗೌಡರು ಮತ್ತು ಶ್ರೀ ಎಸ್.ಎಲ್. ಭೋಜೇಗೌಡರ ಕುಟುಂಬವನ್ನು ನೋಡಬೇಕೆಂದು ನನ್ನಗನ್ನಿಸುತ್ತದೆ. ಅಂತಹ ಒಬ್ಬ ಶ್ರೇಷ್ಠ ವ್ಯಕ್ತಿ ಇವೊತ್ತಿನ ದಿವಸ ನಮ್ಮ ಜೊತೆಯಲ್ಲಿ ಇರುವುದಿಲ್ಲ. ಅಂತಹ ಶ್ರೇಷ್ಠ ರಾಜಕಾರಣಿಗಳು ಅಪರೂಪಕ್ಕೆ ನಮ್ಮಲ್ಲಿ ಬರುತ್ತಾರೆ, ಹೋಗುತ್ತಾರೆ. ಅಂತಹ ಒಬ್ಬ ಶ್ರೇಷ್ಠ, ಸರಳ, ಸಜ್ಜನ ರಾಜಕಾರಣಿ ಮತ್ತು ಪರಿಸರ ಪ್ರೇಮಿಯನ್ನು ನಾವು ಕಳೆದುಕೊಂಡಿದ್ದೇವೆ. ಒಂದು ಬಾರಿ ನಾನು ಶ್ರೀಯುತರ ಜೊತೆಯಲ್ಲಿ ಬೆಂಗಳೂರಿನಿಂದ ಅವರ ಊರಿಗೆ ಹೋಗುತ್ತಿದ್ದೆನು. ಆ ಸಂದರ್ಭದಲ್ಲಿ ಮಾರ್ಗ ಮಧ್ಯದಲ್ಲಿ ರಸ್ತೆ ಅಗಲೀಕರಣಕ್ಕಾಗಿ ದೊಡ್ಡ ದೊಡ್ಡ ಮರಗಳನ್ನು ಕಡಿಯುವುದನ್ನು ನೋಡಿ ಅದಕ್ಕೆ ಅವರು ಬಹಳಷ್ಟು ವಿರೋಧ ವ್ಯಕ್ತಪಡಿಸುತ್ತಿದ್ದರು. ಅಲ್ಲದೇ, ಇಂತಹ ಮರಗಳು ಇವೊತ್ತಿನ ದಿವಸ ಎಲ್ಲಿ ಸಿಗುತ್ತವೆ ಅಥವಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂತಹ ಮರಗಳನ್ನು ಇವೊತ್ತಿನ ದಿವಸ ಬೆಳೆಸುವುದಕ್ಕೆ ಕನಿಷ್ಠ ನೂರು ವರ್ಷ ಬೇಕೆಂದು ಇಂಜಿನಿಯರ್‌ಗಳಿಗೆ ಕೇಳುತ್ತಿದ್ದರು ಹಾಗೂ ಇದಕ್ಕೆ ಪರ್ಯಾಯ ದಾರಿ ಮಾಡಬೇಕೆಂದು ನನ್ನ ಎದುರಿಗೆ ಮಾತನಾಡಿದಂತಹ ಉದಾಹರಣೆ ಸಹ ಇದೆ. ಅಂದರೆ, ಶ್ರೀಯುತರಿಗೆ ಪರಿಸರದ ಬಗ್ಗೆ ಅಷ್ಟು ಕಾಳಜಿ ಇತ್ತು. ಅಂತಹ ಒಬ್ಬ ಶ್ರೇಷ್ಠ ವ್ಯಕ್ತಿಯನ್ನು ಕಳೆದುಕೊಂಡಂತಹ ಈ ಸದನ ಬಡವಾಗಿದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಜೈವಂತ ಪ್ರೇಮಾನಂದ ಸುಬ್ರಾಯ್**ರವರು ಶಿರಸಿಯವರು. ಶ್ರೀ ಜೆ.ಹೆಚ್. ಪಟೇಲ್‌ರವರ ಸಚಿವ ಸಂಪುಟದಲ್ಲಿ ಅವರು ಅಬಕಾರಿ ಸಚಿವರಾಗಿದ್ದಂತಹವರು. ಈ ಹಿಂದೆ ನಮ್ಮಲ್ಲಿ ಒಂದು ಪದ್ಧತಿ ಇತ್ತು. ಅದರ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಅದೇನೆಂದರೆ, ಎಲ್ಲಾ ಸದಸ್ಯರನ್ನು ಊಟಕ್ಕೆ ಕರೆಯುವಂತಹ ಒಂದು ಪದ್ಧತಿ ಇತ್ತು. ಆ ಸಂದರ್ಭದಲ್ಲಿ ಶ್ರೀ ಜೆ.ಹೆಚ್. ಪಟೇಲರು, ಶ್ರೀ ಜೈವಂತ ಪ್ರೇಮಾನಂದ ಸುಬ್ರಾಯ್‌ರವರಿಗೆ, "ಏನಪ್ಪಾ, ಹೇಗೆ ನಡೆಸುತ್ತಿದ್ದೀಯಾ ಕೆಲಸ" ಎಂದು ಕೇಳಿದರು. ಅದಕ್ಕೆ ಅವರು, "ಏನ್ರೀ ಮಾರಾಯರೇ, ನನಗೆ ಇಂತಹ ಖಾತೆ ಕೊಟ್ಟೀದ್ದಿರಿ" ಎಂದು ಹೇಳಿದರು. ಅದಕ್ಕೆ ಶ್ರೀ ಜೆ.ಹೆಚ್. ಪಟೇಲರು, "ನೀನು ಕುಡಿಯುವುದಿಲ್ಲ, ಜೊತೆಗೆ ಮಂದಿಗೆ ಕುಡಿಯುವುದಕ್ಕೆ ಬಿಡುವುದಿಲ್ಲ. ಅದಕ್ಕಾಗಿ ನಿನಗೆ ಈ ಖಾತೆ ಕೊಟ್ಟಿದ್ದೇನೆ" ಎಂದು ಬಹಳ ಹಾಸ್ಯಮಯವಾಗಿ ಹೇಳಿದರು. ಅದಕ್ಕೆ ಶ್ರೀಯುತರು, "ಸರ್, ತಾವು ಕೊಟ್ಟಂತಹ ಖಾತೆಯನ್ನು ಪ್ರಾಮಾಣಿಕವಾಗಿ ನಿಭಾಯಿಸಿ, ರಾಜ್ಯಕ್ಕೆ ಸ್ವಲ್ಪವಾದರೂ ಉಳಿತಾಯವನ್ನು ಮಾಡಿಕೊಡುವ ಕೆಲಸ ಮಾಡುತ್ತೇನೆಂದು" ಹೇಳಿದರು. ಅಲ್ಲದೇ, ಶ್ರೀಯುತರು ಶಿರಸಿಯಲ್ಲಿ ಒಂದು ದೊಡ್ಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಬಹಳ ಸರಳ, ಸಜ್ಜನ ವ್ಯಕ್ತಿಯಾದಂತಹ ಶ್ರೀ ಜೈವಂತ ಪ್ರೇಮಾನಂದ ಸುಬ್ರಾಯ್‌ರವರು ಇವೊತ್ತಿನ ದಿವಸ ನಮ್ಮನ್ನು ಅಗಲಿ ಹೋಗಿದ್ದಾರೆ.

**ಶ್ರೀಮತಿ ರೇಣುಕಾ ರಾಜೇಂದ್ರನ್** ಅವರು 1981ನೇ ಇಸವಿಯಲ್ಲಿ ದಿವಂಗತ ಶ್ರೀ ಗುಂಡೂರಾವ್ ಅವರ ಸಚಿವ ಸಂಪುಟದಲ್ಲಿ ಕ್ರೀಡಾ ಹಾಗೂ ರೇಷ್ಮೆ ಮಂತ್ರಿಗಳಾಗಿ ಕಾರ್ಯನಿರ್ವಹಿಸಿರುತ್ತಾರೆ. 1981ನೇ ಇಸವಿಯಲ್ಲಿ ಯಾವುದೋ ಒಂದು ಕೆಲಸಕ್ಕಾಗಿ ಅನಿವಾರ್ಯ ಕಾರಣಗಳಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತಹ ಪರಿಸ್ಥಿತಿ ಬಂತು. ಆ ಬಗ್ಗೆ ನಮ್ಮ ಸದನದಲ್ಲಿ ಬಹಳಷ್ಟು ಚರ್ಚೆಯಾಗಿತ್ತು. ಆ ಸಂದರ್ಭದಲ್ಲಿ ಶ್ರೀ ಎ.ಕೆ. ಸುಬ್ಬಯ್ಯನವರು, ಶ್ರೀ ಎಸ್. ವೆಂಕಟರಾಮಣ್ಣನವರು, ಶ್ರೀ ನಟರಾಜ್‌ರವರು ಹಾಗೂ ಇತರರು ಅನೇಕ ಟೀಕೆ-ಟಿಪ್ಪಣಿಗಳನ್ನು ಮಾಡಿದರು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(08) 28.01.2021 1.50 ವೈಎಲ್-ಕೆಎಸ್(ಬಿಎನ್ಎಸ್)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** (ಮುಂದು):-

ಟೀಕೆ-ಟಿಪ್ಪಣಿ ಮಾಡುವಂತಹ ಸಂದರ್ಭದಲ್ಲಿ ಅತಿಯಾದ ಟೀಕೆ-ಟಿಪ್ಪಣಿಯಿಂದ ಶ್ರೀಮತಿ ರೇಣುಕಾ ರಾಜೇಂದ್ರನ್‌ರವರು ರಾಜೀನಾಮೆ ನೀಡಬೇಕೆಂದು ಹಠ ಹಿಡಿದಿದ್ದರು. ಆ ಸಂದರ್ಭದಲ್ಲಿ ಶ್ರೀ ಆರ್.ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದು, ಬಹಳ ವಿನಂತಿ ಮಾಡಿಕೊಂಡರೂ ಅವರು ಕೇಳಲಿಲ್ಲ. ನನಗೆ ಇವತ್ತಿಗೂ ನೆನಪಿದೆ. ಆ ಸಂದರ್ಭದಲ್ಲಿ ಶ್ರೀಮತಿ ಬಸವರಾಜೇಶ್ವರಿಯವರು ಈ ಸದನದ ಸಭಾಪತಿಗಳಾಗಿದ್ದು, 'ಏನ್ರೀ, ಆ ಹೆಣ್ಣು ಮಗಳಿಗೆ ಎಷ್ಟು ತೊಂದರೆ/ಹಿಂಸೆ ಮಾಡುತ್ತೀರಿ, ಪಾಪ ಹೇಳುವುದನ್ನೇ ಎಷ್ಟು ಸಲ ಹೇಳುತ್ತೀರಿ, ಆ ಹೆಣ್ಣು ಮಗಳ ಬಗ್ಗೆ ಮಾತನಾಡಲು ಇಷ್ಟು ಚರ್ಚೆಗೆ ಆಸ್ಪದ ಕೊಡಲು ನನಗೆ ಇಷ್ಟ ಇಲ್ಲ' ಎಂದು ಶ್ರೀಮತಿ ಬಸವರಾಜೇಶ್ವರಿಯವರನ್ನು ಜೋರು ಮಾಡಿದರು. ನಂತರ 2-3 ದಿವಸಗಳ ನಂತರ ದಿ॥ ರೇಣುಕಾ ರಾಜೇಂದ್ರನ್‌ರವರು ರಾಜೀನಾಮೆ ಸಲ್ಲಿಸಿದರು. ಕಾಲಕಾಲಕ್ಕೆ ಎಲ್ಲರೊಂದಿಗೂ ಹೊಂದಿಕೊಂಡು ಕೆಲಸ ಮಾಡುವಂಥ ಮಹಿಳಾ ಸಚಿವೆಯಾಗಿ ಅವರು ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಹಲವಾರು ಸಂದರ್ಭದಲ್ಲಿ ಅವರು ಸಚಿವರಲ್ಲದಿದ್ದರು ವಿಧಾನಸೌಧಕ್ಕೆ ಬಂದಾಗ ಎಲ್ಲರನ್ನೂ ಭೇಟಿಯಾಗಿ ಮಾತನಾಡುತ್ತಿದ್ದ ಒಬ್ಬ ಒಳ್ಳೆಯ ಹೆಣ್ಣು ಮಗಳಾಗಿದ್ದರು. ಕೇವಲ ಸಚಿವೆಯಾಗಿ ಮಾತ್ರ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಒಳ್ಳೆಯ ಶಾಸಕಿಯಾಗಿ ಸಹ ಕರ್ತವ್ಯ ನಿರ್ವಹಿಸುತ್ತಿದ್ದುದನ್ನು ನನ್ನ ಕಣ್ಣಾರೆ ನೋಡಿದ್ದೇನೆ.

ಹಾಗೆಯೇ ಈಗಾಗಲೇ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದ ಹಾಗೆ, ಅದೇ ರೀತಿ ಮಲ್ಲಪ್ಪ ಚನ್ನವೀರಪ್ಪ ಮನಗೂಳಿಯವರು ತಮ್ಮ ವೃತ್ತಿ ಜೀವನವನ್ನು ಗ್ರಾಮ ಸೇವಕರಾಗಿ ಪ್ರಾರಂಭ ಮಾಡಿದರು. ವೃತ್ತಿ ಜೀವನ ಪ್ರಾರಂಭ ಮಾಡುತ್ತಾ, ಮಾಡುತ್ತಾ, ಅವರು ಜನರೊಂದಿಗೆ ಕೂಡಿ ಇಲ್ಲಿ ಆಗುತ್ತಿರುವ ನ್ಯೂನತೆಗಳು, ಲೋಪದೋಷಗಳನ್ನು ನೋಡುತ್ತಾ, ನೋಡುತ್ತಾ ರಾಜೀನಾಮೆ ಸಲ್ಲಿಸಿದರು. ನಂತರ ರಾಜಕಾರಣಕ್ಕೆ ಸೇರಿದರು. 2-3 ಸಲ ಅವರು ಸಿಂಧಗಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದರು. ಎರಡನೇ ಬಾರಿ ಆಯ್ಕೆಯಾಗಿ ತೋಟಗಾರಿಕೆ ಸಚಿವರು ಸಹ ಆಗಿದ್ದರು. ಅಲ್ಲದೇ ವೃತ್ತಿಯಲ್ಲಿ ಕೃಷಿಕರಾಗಿದ್ದರು. ಜೊತೆಗೆ ಅವರು ಸಿನಿಮಾ ಟಾಕೀಸ್ ಸಹ ಹೊಂದಿದ್ದು, ಎಲ್ಲಾ ಸಿನಿಮಾಗಳ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿಯನ್ನು ಸಂಗ್ರಹಿಸುತ್ತಿದ್ದರು. ಕೃಷಿ, ಸಾಮಾಜಿಕ ಕಳಕಳಿ ಎಲ್ಲವನ್ನೂ ಹೊಂದಿದ್ದು, ಬಹಳ ಸರಳ–ಸಜ್ಜನರಾಗಿದ್ದರು. ನಾವು ಅವರಿಗೆ ಏನೇ ಮಾತನಾಡಿದರೂ ಒಮ್ಮೆ ಸಹ ಬೇಸರ ಮಾಡಿಕೊಳ್ಳದಂತೆ ಇರುತ್ತಿದ್ದರು. 2018ನೇ ಸಾಲಿನಲ್ಲಿ ಎರಡನೇ ಬಾರಿಗೆ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ ಬಂದಾಗ ಅವರಿಗೆ ಸ್ವಲ್ಪ ಸಮಸ್ಯೆಯಿದ್ದ ಕಾರಣ ಟಿಕೆಟ್ ಸಲುವಾಗಿ ಅವರಿಬ್ಬರ ಮಕ್ಕಳಲ್ಲಿ ಒಬ್ಬರಿಗೆ ಟಿಕೆಟ್ ನೀಡಬೇಕೆಂದು ನಮ್ಮಲ್ಲಿಯೇ ಒಬ್ಬರು ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಅವರ ಮಗನೊಬ್ಬ ಡಾಕ್ಟರ್ ಆಗಿದ್ದರು. ನಾನು ಅವರಿಗಿಂತ ವಯಸ್ಸಿನಲ್ಲಿ ಚಿಕ್ಕವನಾಗಿದ್ದರು, ಅವರು ನನ್ನನ್ನು 'ಸರ್' ಎಂದೇ ಕರೆಯುತ್ತಿದ್ದರು. ಅವರು ನನ್ನ ಬಳಿ ಬಂದು 'ನನ್ನ ಮಗ ಡಾಕ್ಟರ್ ಸೇವೆಯನ್ನು ಚೆನ್ನಾಗಿ ಮಾಡುತ್ತಾನೆ, ಆತನನ್ನು ಆ ವೃತ್ತಿಯಿಂದ ಬಿಡಿಸಿ, ರಾಜಕಾರಣಕ್ಕೆ ತರಬಾರದು' ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿಯವರಿಗೆ ಹೇಳಿ ಎಂದು ಹೇಳಿದರು. ಆಗ ನಾವೆಲ್ಲರೂ ಈ ಸಲ ನೀವೇ ಚುನಾವಣೆಗೆ ನಿಲ್ಲಿ ಎಂದು ಹೇಳಿದ್ದೆವು. ಅದಕ್ಕೆ ಅವರು ನನಗೆ ವಯಸ್ಸಾಗುತ್ತಿದೆ, ಬೇಡ ಎಂದು ಹೇಳಿದರು. ನಂತರ ನಾವು ಹಾಗಾದರೆ ನಿಮ್ಮ ಮಗ ಡಾಕ್ಟರ್ ವೃತ್ತಿಯನ್ನು ಬಿಡಬೇಕಾಗುವ ಪರಿಸ್ಥಿತಿ ಉಂಟಾಗುತ್ತದೆ ಎಂದು ಹೇಳಿದಾಗ, ಅವರು ಕೂಡಲೇ ಚುನಾವಣೆಗೆ ನಿಲ್ಲಲು ಒಪ್ಪಿಕೊಂಡು, ಚುನಾವಣೆಗೆ ನಿಂತು ಆಯ್ಕೆಗೊಂಡರು. ಆಯ್ಕೆಗೊಂಡ ಮೇಲೆ ನನ್ನ ಹತ್ತಿರ ಬಂದು 'ಸರ್, ನೀವು ಇಷ್ಟೆಲ್ಲಾ ಪ್ರಯತ್ನ ಮಾಡಿದ್ದಕ್ಕೆ ನನ್ನ ಕ್ಷೇತ್ರದ ಜನ ಆಶೀರ್ವಾದ ಮಾಡಿದ್ದರು, ಈ ಮುಪ್ಪಿನ ಕಾಲಕ್ಕೆ ನನಗೆ ಒಂದು ಒಳ್ಳೆಯ ಯಾವುದಾದರೂ ಬೋರ್ಡ್/ಕಾರ್ಪೊರೇಷನ್‌ಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ, ಕೊನೆ ಕಾಲದಲ್ಲಿ ಸರ್ಕಾರಿ ಕಾರಿನಲ್ಲಿ ಅಡ್ಡಾಡುತ್ತೇನೆ' ಎಂದು ಹೇಳಿದರು. ನಾವು ಆಗ 'ಏತಕ್ಕೆ ಬೋರ್ಡ್/ಕಾರ್ಪೊರೇಷನ್‌ಗೆ ಅಧ್ಯಕ್ಷರಾಗುತ್ತೀರಿ, ನಿಮ್ಮನ್ನು ಸಚಿವರಾಗಿಯೇ ನೇಮಕ ಮಾಡುತ್ತೇವೆ' ಎಂದು ಹೇಳಿದ್ದೆವು. ಸಹಜವಾಗಿ ಅವರು ಸಚಿವರಾಗಿ ಆಯ್ಕೆಗೊಂಡರು. ಸಚಿವರಾಗಿ ನೇಮಕಗೊಂಡ ಮೇಲೆ oath ತೆಗೆದುಕೊಂಡು, ನೇರವಾಗಿ ನನ್ನ ಹತ್ತಿರ ಬಂದು ನಿಮ್ಮ ಬಾಯಿ ಹರಕೆಯಿಂದ ನಾನು ಸಚಿವನಾಗಿದ್ದೇನೆ, ಆ ಸಂದರ್ಭದಲ್ಲಿ ಶ್ರೀ ಎಂ.ಪಿ.ಪ್ರಕಾಶ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾಗಿದ್ದು, ನಾನು ಅವರ ಕೈ ಕೆಳಗೆ State Minister ಆಗಿ ಕರ್ತವ್ಯ ನಿರ್ವಹಿಸುತ್ತಿದ್ದುದರಿಂದ ಆಗ ನನಗೆ ಸಾಕಷ್ಟು ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಈಗ ನಾನು ಕ್ಯಾಬಿನೆಟ್ ಸಚಿವನಾಗಿದ್ದೇನೆ, ಸಾಕಷ್ಟು ಕೆಲಸ ಮಾಡುತ್ತೇನೆ ಎಂದು ಸ್ವೀಟ್ ನೀಡಿದರು. ಜೊತೆಗೆ ಅವರು ಯಾವತ್ತು ಸಹ ಒಬ್ಬರಿಗೂ ಕೇಡಕನ್ನು ಬಯಸಲಿಲ್ಲ, ನಾನು ಇಂತಹ ವ್ಯಕ್ತಿಯನ್ನು ನೋಡಿಯೇ ಇರಲಿಲ್ಲ. ಅಂತಹ ಮಲ್ಲಪ್ಪ ಚನ್ನವೀರಪ್ಪ ಮನಗೂಳಿಯವರು ಇವತ್ತು ನಮ್ಮ ಎದುರುಗಡೆ ಇಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ರೀತಿ **ಶ್ರೀ ರಾಮ ನಾಗಪ್ಪ ಶೆಟ್ಟಿಯವರು** ಮೂಲತಃ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಜನಿಸಿದ್ದರೂ ಕೂಡಾ ಹುಬ್ಬಳ್ಳಿಯಲ್ಲಿ ನೆಲೆಸಿದ್ದರು. ಇವತ್ತು ಇಡೀ ಹುಬ್ಬಳ್ಳಿಯ ಜನತೆಗೆ ಶ್ರೀ ಆರ್.ಎನ್.ಶೆಟ್ಟಿ ಯಾರು ಎಂಬುವುದನ್ನು ಮನೆ-ಮನೆಯವರು ಸಹ ನೆನಪಿಟ್ಟುಕೊಳ್ಳುವಂಥ ಕೆಲಸ ಮಾಡಿದ್ದಾರೆ. ಬಹಳ ಶ್ರೇಷ್ಠವಾದಂಥ ದಾನಿಯಾಗಿದ್ದರು. ನಾನು ಅವರನ್ನು 30-35 ವರ್ಷಗಳಿಂದ ನೋಡಿದ್ದೇನೆ, ಯಾರು ಅವರ ಮನೆಗೆ ಹೋಗಿ ದಾನ ಕೇಳಿದ್ದರೂ, ಒಬ್ಬರಿಗೂ ಸಾಧ್ಯವಿಲ್ಲ ಎನ್ನುವಂಥ ಮಾತನ್ನು ಹೇಳುತ್ತಿರಲಿಲ್ಲ. ಆಗ ಕಿತ್ತೂರು ರಾಣಿ ಚೆನ್ನಮ್ಮ ರೈಲಿನಲ್ಲಿ ಸುಮಾರು 20 ವರ್ಷಗಳು ಅವರ ಜೊತೆ ಪ್ರಯಾಣಿಸಿದ್ದೇನೆ. ಅವರ ವಿಚಾರಗಳು ಯಾವ ರೀತಿ ಇತ್ತು ಎಂದರೆ, ನಾನು ಅವರಿಗೆ ಒಮ್ಮೆ 'ಶೆಟ್ಟರೆ, ಇಷ್ಟೆಲ್ಲಾ ರಸ್ತೆ ನಿರ್ಮಾಣ ಮಾಡಿದ್ದೀರಿ, 1200 ಮಂದಿ ನೌಕರರಿದ್ದಾರೆ, ಹೇಗೆ ಮ್ಯಾನೇಜ್ ಮಾಡುತ್ತೀರಿ, ಹೇಗೆ ನೀವು ಕೋಟ್ಯಂತರ ರೂಪಾಯಿ ವ್ಯವಹಾರ ಮಾಡುತ್ತೀರಿ ಎಂದು ಕೇಳಿದೆ. ಉದಾಹರಣೆಗೆ, ರಸ್ತೆ ನಿರ್ಮಾಣಕ್ಕಾಗಿ ರೂ.120.00 ಕೋಟಿ ವ್ಯವಹಾರ ವಹಿಸಿದ್ದು, ಅದನ್ನು ಹೇಗೆ ಮ್ಯಾನೇಜ್ ಮಾಡುತ್ತೀರಿ, ಇಷ್ಟು ದೊಡ್ಡ ಮೊತ್ತದಲ್ಲಿ ಯಾರ್‍ಯಾರು ಏನೇನು ವ್ಯವಹಾರ ಮಾಡುತ್ತಾರೆಯೋ, ನಿಮಗೆ ಹೇಗೆ ಗೊತ್ತಾಗುತ್ತದೆ' ಎಂದು ಕೇಳಿದೆ. ಆಗ ಅವರು ನನಗೆ ಒಂದು ಮಾತನ್ನು ಹೇಳಿದ್ದು, ನನಗೆ ಇವತ್ತಿಗೂ ನೆನಪಿಗೆ ಬರುತ್ತಿದೆ. ಅವರು 'ಹೊರಟ್ಟಿಯವರೇ, ನಾನು ರೂ.100 ಕೋಟಿಗೆ ಗುತ್ತಿಗೆ ವಹಿಸಿಕೊಂಡರೆ, ಅದರಲ್ಲಿ ರೂ.5.00 ಕೋಟಿ ಅಥವಾ ರೂ.6.00 ಕೋಟಿ ನನಗೆ ಲಾಭ ಬರಬೇಕಾಗುತ್ತದೆ. ಅದರ ನಡುವೆ ನೌಕರರು ಅಲ್ಲಿ ಇಲ್ಲಿ ತಿಂದು, ಅದೆಲ್ಲವನ್ನೂ ಮುಗಿಸಿಯೇ ನನಗೆ ಇಷ್ಟೇ ಲಾಭ ಬಂದರೆ ಸಾಕು, ಅವರು ಬೇಕಾದರೆ ಹೆಚ್ಚು ಲಾಭ ಮಾಡಿಕೊಂಡರೆ, ಮಾಡಿಕೊಳ್ಳಲಿ' ಎನ್ನುವಂಥ ಮಾತನ್ನು ಹೇಳಿದರು. ಒಬ್ಬ ಗುತ್ತಿಗೆದಾರ ಯಾವುದೇ ರೀತಿಯಿಂದ ಸರ್ಕಾರಕ್ಕೆ ಉತ್ತಮವಾಗಿ, ಕರ್ತವ್ಯ ನಿರ್ವಹಿಸುವವನು ಎಲ್ಲಿಯೂ ಮೋಸ ಮಾಡುವುದಿಲ್ಲ ಎಂದು ಹೇಳುತ್ತಿದ ಅವರು ಸಾರ್ವಜನಿಕ ಬದುಕಿನಲ್ಲಿ ಉತ್ತಮವಾದ ಕೆಲಸ ಮಾಡಿದರು. ಬಹಳ ದೊಡ್ಡದಾದ ಶ್ರೇಷ್ಠ ದಾನಿಗಳಾಗಿದ್ದರು. ಎಲ್ಲಿ ಹೋದರೂ ಸಹಿತ ದಾನ-ಧರ್ಮದಲ್ಲಿ ಎತ್ತಿದ ಕೈ ಆಗಿದ್ದರು. ಅಂತಹ ಶ್ರೇಷ್ಠ ಉದ್ಯಮಿ ಇವತ್ತು ನಮ್ಮ ಜೊತೆ ಇಲ್ಲ.

**ಡಾ||ಬನ್ನಂಜೆ ಗೋವಿಂದಾಚಾರ್ಯರು, ಪ್ರೊಫೆಸರ್ ರೊದ್ದಂ ನರಸಿಂಹರವರು, ಶ್ರೀಮತಿ ಮಹಾದೇವಿ ಅಣ್ಣಾರಾವ ವಣದೆ, ಶ್ರೀ ಶ್ರೀ ಶ್ರೀ ಸ್ವಾಮಿ ಹರ್ಷಾನಂದ ಮಹಾರಾಜ್, ಗುಲಾಮ್ ಮುಸ್ತಫಾ ಖಾನ್‌ರವರು** ಇವರೆಲ್ಲರೂ ನಾಡಿನ ಶ್ರೇಷ್ಠ ಸಾಹಿತಿಗಳು, ಸಂಗೀತಗಾರರು, ಧರ್ಮ ಗುರುಗಳು, ಶಿಕ್ಷಣ ತಜ್ಞರು, ಪಂಡಿತರು ಎಲ್ಲವನ್ನೂ ಒಳಗೊಂಡಿರುವಂಥ ಜನ ಇನ್ನು ಮುಂದೆ ನಮಗೆ ಸಿಗುವುದು ಬಹಳ

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ವಿರಳ. ಈ ನಾಡಿನ, ದೇಶದ ಮತ್ತು ರಾಜ್ಯದ ಅಂತಹ ಶ್ರೇಷ್ಠರನ್ನು 10 ಜನ ವ್ಯಕ್ತಿಗಳನ್ನು ನಾವು ಕಳೆದುಕೊಂಡಿದ್ದೇವೆ. ಅದರಲ್ಲಿ ಪ್ರಮುಖವಾಗಿ ಮಾನ್ಯ ಉಪ ಸಭಾಪತಿಗಳಾಗಿದ್ದ ಎಸ್.ಎಲ್.ಧರ್ಮೇಗೌಡರು, ಮಾಜಿ ಸಚಿವರಾಗಿದ್ದ ಜೈವಂತ ಪ್ರೇಮಾನಂದ ಸುಬ್ರಾಯ್, ಶ್ರೀಮತಿ ರೇಣುಕಾ ರಾಜೇಂದ್ರನ್ ಹಾಗೂ ಮಲ್ಲಪ್ಪ ಚನ್ನವೀರಪ್ಪ ಮನಗೂಳಿಯವರು ಈ ನಾಲ್ಕು ಜನರು ಸದನಕ್ಕೆ ಸಚಿವರಾಗಿ, ಸದಸ್ಯರಾಗಿ ಬರುತ್ತಿದ್ದರು. ಇವರೆಲ್ಲರನ್ನೂ ನಾವು ನೋಡಿದ್ದೇವೆ. ಇಂತಹ ಎಲ್ಲಾ ಶ್ರೇಷ್ಠ ಜನರನ್ನು ನಾವು ಕಳೆದುಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಇವರೆಲ್ಲಾ ನಮಗೆ ಮಾರ್ಗದರ್ಶಕರು ಎನ್ನುವಂಥ ಭಾವನೆಯನ್ನಿಟ್ಟುಕೊಂಡು, ಇವರು ಈ ನಾಡಿನ ಶ್ರೇಷ್ಠ ವ್ಯಕ್ತಿಗಳು, ಶ್ರೇಷ್ಠ ರಾಜಕಾರಣಿಗಳಾಗಿದ್ದು, ಮತ್ತೊಮ್ಮೆ ನೋಡಬೇಕೆನ್ನುವ ತವಕ ನಮ್ಮಲ್ಲಿ ಇದೆ. ಇಂತಹ ಶ್ರೇಷ್ಠ ವ್ಯಕ್ತಿಗಳಿಗೆ ಈ ಸದನದ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ತಾವು ತಂದಿರುವ ನಿರ್ಣಯವನ್ನು ನಾವೆಲ್ಲರೂ ಬೆಂಬಲಿಸೋಣ. ಸದಾ ಅಂಥವರ ಮಾರ್ಗದರ್ಶನದಲ್ಲಿ ನಡೆಯೋಣ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಾ, ಹುಟ್ಟು-ಸಾವುಗಳ ಮಧ್ಯೆಯಲ್ಲಿ ಈ ಜನರ ಅಪಾರವಾದಂಥ ಕೊಡುಗೆ ಇದೆ. ಅವರ ಕೊಡುಗೆಯನ್ನು ನೆನಪಿಸಿಕೊಳ್ಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಹಾರೈಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿ ಉಪಸ್ಥಿತರಿದ್ದ ಎಲ್ಲರೂ ಎದ್ದು ನಿಂತು, ಮೃತರ ಗೌರವಾರ್ಥ ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)**

**(ಸದನವು ಮಧ್ಯಾಹ್ನ 1 ಗಂಟೆ 59 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 29.01.2021 ರ ಶುಕ್ರವಾರದಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

~~~~~

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”
~~~~~